# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 Volume:01 • ಸಂಚಿಕೆ:214 Issue:214 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 19.01.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2







**ಮೈಕ್ರೋ ನ್ಯೂಸ್**

## ವಾಣಿಜ್ಯ ತೆರಿಗೆ ಪರಿವೀಕ್ಷಕರ ಪರೀಕ್ಷೆ: ನಿಷೇಧಾಜ್ಞೆ ಜಾರಿ

**ಹಂಪಿ ಟೈಮ್ಸ್ ಹೊಸಪೇಟೆ**

ಜನವರಿ 20 ರಿಂದ ಜನವರಿ 21ರವರೆಗೆ ನಡೆಯುವ ವಾಣಿಜ್ಯ ತೆರಿಗೆ ಪರಿವೀಕ್ಷಕರ ಗ್ರೂಪ್ ಸಿ ಹುದ್ದೆಯ ನೇಮಕಾತಿ ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಪರೀಕ್ಷೆಗಳು ಸುಗಮವಾಗಿ ನಡೆಯುವ ದೃಷ್ಟಿಯಿಂದ ಸಿಆರ್‌ಪಿಸಿ ಕಾಯಿದೆ 1973ರ ಕಲಂ 144ರನ್ವಯ ಪ್ರದತ್ತವಾದ ಅಧಿಕಾರ ಮೇರೆಗೆ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದು ಪರೀಕ್ಷಾ ಕೇಂದ್ರಗಳ ಸುತ್ತಲು ಝರಾಕ್ಸ್ ಮತ್ತು ಕಂಪ್ಯೂಟರ್ ಸೈಬರ್ ಅಂಗಡಿಗಳನ್ನು ಮುಚ್ಚುವಂತೆ ಆದೇಶಿಸಲಾಗಿದೆ. ಈ ಪ್ರದೇಶದಲ್ಲಿ ಅನಧೀಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರದೇಶ ನಿಷೇಧಿಸಿದೆ. ಈ ಆದೇಶವು ಪರೀಕ್ಷಾ ಕಾರ್ಯನಿರ್ವಹಿಸುವ ಅಧಿಕಾರಿ ಸಿಬ್ಬಂದಿಗೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಜೀವ ಬಲಿಗಾಗಿ ಕಾಯ್ತಿವೆ ರೋಡ್ ಬ್ರೇಕರ್ಸ್!

### ರೋಡ್ ಬ್ರೇಕರ್ಸ್ ಯಾರು ಹಾಕಿದ್ದಾರೆಂದು ಸಂಬಂಧಿಸಿದ ಇಲಾಖೆಯವರಿಗೆ ಮಾಹಿತಿ ಇಲ್ಲ | ವಾಹನ ಸವಾರರ ಗೋಳು ಕೇಳುವವರಾರು?

**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ನಗರಸಭೆ ರಸ್ತೆ ಹಾಗೂ ಲೋಕೋಪಯೋಗಿ ಇಲಾಖೆಯ ಪ್ರಮುಖ ರಸ್ತೆಗಳು ಹಾದುಹೋಗಿದ್ದು, ಅಪಘಾತ ತಡೆಯಲೆಂದು ಇತ್ತೀಚೆಗೆ ಅಳವಡಿಸಿರುವ ರಬ್ಬರ್ ರೊಡ್‌ಬ್ರೇಕರ್‌ಗಳು ಅವೈಜ್ಞಾನಿಕವಾಗಿದ್ದು, ವಾಹನ ಸವಾರರು, ಪ್ರಯಾಣಿಕರು ಹೈರಾಣಾಗುತ್ತಿದ್ದಾರೆ.

ನಗರದಲ್ಲಿನ ರೋಡ್ ಬ್ರೇಕರ್‌ಗಳನ್ನು ಸಂಬಂಧಿಸಿದ ತಜ್ಞರ ಅಭಿಪ್ರಾಯಗಳನ್ನು ಪಡೆಯದೇ ಬೇಕಾಬಿಟ್ಟಿಯಾಗಿ ಹಾಕಲಾಯ್ತಾ ಎಂಬ ಪ್ರಶ್ನೆ ಸವಾರರನ್ನು ಕಾಡುತ್ತಿದ್ದು, ಬ್ರೇಕರ್‌ಗಳು ವಾಹನ ಸವಾರರಿಗೆ ಕಂಠಕವಾಗಿವೆ ಎಂದು ಸವಾರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಗರದ ಡ್ಯಾಂ ರಸ್ತೆ, ಮಾರ್ಕಂಡೇಶ್ವರ ದೇವಸ್ಥಾನ, ಬಸವೇಶ್ವರ ವೃತ್ತದಿಂದ ಸಾಯಿಬಾಬ ವೃತ್ತದವರೆಗೆ ತೆರಳುವ ರಸ್ತೆ ಮಾರ್ಗದಲ್ಲಿ ವಾಹನಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ಅಳವಡಿಸಲಾಗಿದೆ. ವಾರ





ಕಳೆಯುವದರೊಳಗೆ ರಬ್ಬರ್ ರೋಡ್‌ಬ್ರೇಕರ್‌ಗಳ ಮೇಲೆ ಜಡಿಯಲಾಗಿದ್ದ ಮಳೆಗಳು ವಾಹನಗಳ ರಭಸಕ್ಕೆ ಮೇಲೆದ್ದಿವೆ. ರಬ್ಬರ್ ಕಿತ್ತೋಗಿದೆ. ನಗರದಲ್ಲಿ ಟೂವ್ಹೀಲರ್, ಲಘುವಾಹನಗಳ ಸಂಚಾರ ಅಧಿಕವಿರುತ್ತದೆ. ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು. ಈಗ ಹಾಕಲಾಗಿರುವ ಬ್ರೇಕರ್ಸ್‌ಗಳಿಂದ ವಾಹನಗಳು ಬಹುಬೇಗನೇ ಗುಜರಿ ಪಾಲಾಗಲಿವೆ. ವಾಹನಗಳ ಟೈರ್‌ಗಳಿಗೆ ತಗುಲಿ ಪಂಕ್ಚರ್ ಆದ್ರೆ ವಾಹನ ನಿಯಂತ್ರಣ ತಪ್ಪಿ ಅಪಘಾತವಾಗುವ ಸಾಧ್ಯತೆಗಳು ಹೆಚ್ಚಿವೆ. ಕೂಡಲೇ ಸಂಬಂಧಪಟ್ಟವರು ನಗರಸಭೆ ಹಾಗೂ ಲೋಕೋಪಯೋಗಿ ಇಲಾಖೆಯ ತಜ್ಞ ಅಧಿಕಾರಿಗಳೊಂದಿಗೆ ಚರ್ಚಿಸಿ ಅವೈಜ್ಞಾನಿಕವಾಗಿ ಅಳವಡಿಸಿರುವ ರೋಡ್ ಬ್ರೇಕರ್ಸ್‌ಗಳನ್ನು ಅಪಘಾತಗಳಾಗುವ ಮುನ್ನ ತೆರವುಗೊಳಿಸಬೇಕು ಎಂದು ವಾಹನ ಸವಾರರು ಆಗ್ರಹಿಸಿದ್ದಾರೆ.

> ಪ್ರಯಾಣಿಕರ ಹಿತದೃಷ್ಟಿಯಿಂದ ಕನಿಷ್ಠ ಅಂತರದ ನಡುವೆ ವೈಜ್ಞಾನಿಕವಾಗಿ ರೋಡ್‌ಬ್ರೇಕರ್ಸ್ ಅಳವಡಿಸಿದರೆ ಬ್ರೇಕರ್ಸ್ ಅಳವಡಿಕೆಯ ಉದ್ದೇಶ ಈಡೇರಬಹುದು. ಆದರೆ ಕೇವಲ ಭಾರಿ ವಾಹನಗಳ ದೃಷ್ಟಿಯಲ್ಲಿಟ್ಟುಕೊಂಡು ರೋಡ್ ಬ್ರೇಕರ್ಸ್ ಅಳವಡಿಸಿದಾಗ ಲಘುವಾಹನ ಚಾಲಕರು ಸುಸ್ತಾಗುತ್ತಿದ್ದಾರೆ. ವಾಲ್ಮೀಕಿ ವೃತ್ತ ಮತ್ತು ಮಾಕಂಡೇಶ್ವರ ಡ್ಯಾಂ ರಸ್ತೆಯಲ್ಲಿ ಕನಿಷ್ಠ ಅಂತರವಿಲ್ಲದೆ ಬ್ರೇಕರ್‌ಗಳನ್ನು ಅಳವಡಿಸಿರುವುದು ಯಾವ ತಜ್ಞರು ಸೂಚಿಸಿದ್ದಾರೆ ಎಂಬ ಪ್ರಶ್ನೆ ಸವಾರರು ಕೇಳುತ್ತಿದ್ದಾರೆ. ಸಂಬಂಧಿಸಿದವರು ಕೂಡಲೇ ಸೂಕ್ತ ಕ್ರಮವಹಿಸಿ ಸುಖ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕಿದೆ.

> ನಗರಸಭೆ ವ್ಯಾಪ್ತಿಯ ರಸ್ತೆಗಳಲ್ಲಿ ಅಳವಡಿಸಿರುವ ಬ್ರೇಕರ್‌ಗಳ ಪರಿಶೀಲನೆಗೆ ಸೂಚಿಸಲಾಗುವುದು. ವರದಿ ನಂತರ ಅಗತ್ಯ ಕ್ರಮವಹಿಸಲಾಗುವುದು.
>
> – ಶಿವಕುಮಾರ, ಪೌರಾಯುಕ್ತರು
> ನಗರಸಭೆ, ಹೊಸಪೇಟೆ

> ರಸ್ತೆಗಳಲ್ಲಿ ಬ್ರೇಕರ್‌ಗಳನ್ನು ಅಳವಡಿಸುವಾಗ ರಸ್ತೆಗೆ ಸಂಬಂಧಪಟ್ಟ ಆರ್‌ಟಿಒ, ಟ್ರಾಫಿಕ್ ಪೊಲೀಸರು , ನಗರಸಭೆ ಅಥವಾ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದು ವೈಜ್ಞಾನಿಕವಾಗಿ ಹಾಕಬೇಕು. ಪ್ರಯಾಣಿಕ ಜೀವಕ್ಕೆ ಕಂಠಕವಾಗಿರುವ ಅವೈಜ್ಞಾನಿಕವಾಗಿ ರಸ್ತೆ ತಡೆಗಳನ್ನು ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಆದ್ಯತೆ ನೀಡಬೇಕು.
>
> – ಕೆ.ಎಂ..ಸಂತೋಷ್ ಕುಮಾರ್
> ರಾಜ್ಯ ಪ್ರಧಾನ ಕಾರ್ಯದರ್ಶಿಗಳು
> ಕರ್ನಾಟಕ ರಾಜ್ಯ ವಾಣಿಜ್ಯ ವಾಹನ ಚಾಲಕರ ಸಂಘ




**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com


> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
>
> ಡಿ..ವಿ.ಜಿ.

**ಒಳ ಪುಟಗಳಲ್ಲಿ**


**ಕಾರ್ಗತ್ತಲ ನಡುವೆ ಭರವಸೆಯ ಬೆಳಕು**
– ವೀಣಾ ಹೇಮಂತಗೌಡ ಪಾಟೀಲ್,
ಪುಟ 2 ರಲ್ಲಿ ಓದಿ

**ಹಂಪಿ ಪ್ರವಾಸ ಅನುಭವ**
ಪುಟ 2 ರಲ್ಲಿ ಓದಿ

**ಭಾನಂಗಳದ ಧೃವತಾರೆ ವೇಮ**
– ಗುರು ಹಿರೇಮಠ
ಪುಟ 3 ರಲ್ಲಿ ಓದಿ


## ಸರ್ಕಾರಿ ನೌಕರರಿಗೆ 7ನೇ ವೇತನ ಜಾರಿಗೊಳಿಸಿ

### ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನ ಗೌಡ ಶಾಸಕ ಗವಿಯಪ್ಪಗೆ ಮನವಿ

**ಹಂಪಿ ಟೈಮ್ಸ್ ಹೊಸಪೇಟೆ**

ಶೀಘ್ರವಾಗಿ 7ನೇ ವೇತನ ಆಯೋಗದಿಂದ ವರದಿ ಪಡೆದು ಅನುಷ್ಠಾನಗೊಳಿಸುವಂತೆ ಮುಖ್ಯಮಂತ್ರಿಗಳಿಗೆ ಶಿಫಾರಸ್ಸು ಮಾಡ ಬೇಕೆಂದು ಒತ್ತಾಯಿಸಿ ವಿಜಯನಗರ ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನ ಗೌಡ ಇವರ ನೇತೃತ್ವದಲ್ಲಿ ಶಾಸಕ ಎಚ್.ಆರ್.ಗವಿಯಪ್ಪ ಅವರಿಗೆ ಗುರುವಾರ ಮನವಿ ಸಲ್ಲಿಸಲಾಯಿತು.

ಸಂಘದ ಜಿಲ್ಲಾಧ್ಯಕ್ಷ ಜಿ.ಮಲ್ಲಿಕಾರ್ಜುನ ಮಾತನಾಡಿ, ನೌಕರರಿಗೆ ಮರಣ ಶಾಸನವಾದ ಎನ್.ಪಿ.ಎಸ್.ರದ್ದು ಮಾಡಿ ಓಪಿಎಸ್ ಜಾರಿಗೆ ತರಬೇಕು. ರಾಜ್ಯ ಸರ್ಕಾರಿ ನೌಕರರಿಗೆ ಕರ್ನಾಟಕ ರಾಜ್ಯ ಆರೋಗ್ಯ ಸಂಜೀವಿನಿ ಯೋಜನೆಯನ್ನು ಲೋಕಾರ್ಪಣೆ ಮಾಡಬೇಕು ಎಂದು ಒತ್ತಾಯಿಸಿದರು.



ಜಿಲ್ಲಾ ಕಾರ್ಯದರ್ಶಿ ಕಡ್ಲಿ ವೀರಭದ್ರೇಶ, ರಾಜ್ಯ ಪರಿಷತ್ ಸದಸ್ಯ ಎಸ್.ಬಸವರಾಜ, ಗೌರವಾಧ್ಯಕ್ಷ ಹೆಚ್.ಜೀವಣ್ಣ, ಉಪಾಧ್ಯಕ್ಷರುಗಳಾದ ಕಾಳಪ್ಪ ಗೌಡ, ಲತಾ, ಪ್ರಶಾಂತ ಜೋಷಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಸವರಾಜ, ಕಾರ್ಯದರ್ಶಿ ಮಲ್ಲಯ್ಯ, ಖಜಾಂಚಿ ದ್ಯಾಮನಾಯ್ಕ್, ಸಂಚಾಲಕ ಹೆಚ್. ಎಂ.ಗುರುಬಸವರಾಜ್, ಕೃಷ್ಣ ದುಂದಪ್ಪ, ಪಂಪಣ್ಣ, ಹನುಮಂತಪ್ಪ, ಹುಡಾ ರಮೇಶ್, ಪ್ರಕಾಶ್, ಕುಲಕರ್ಣಿ, ವಿಶ್ವನಾಥ, ಶಿವಾನಂದ ಗೌಡ, ಕೆ.ಹನುಮಂತ, ಮುಂತಾದ ಸರ್ಕಾರಿ ನೌಕರರು ಇದ್ದರು.

## ಹಂಪಿ ಉತ್ಸವ: ಪುಸ್ತಕ ಪ್ರದರ್ಶನಕ್ಕೆ ಹೆಸರು ನೋಂದಾಯಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ–2024ರ ಅಂಗವಾಗಿ ಏರ್ಪಡಿಸಿದ ಪುಸ್ತಕ ಪ್ರದರ್ಶನಕ್ಕೆ ಆಸಕ್ತ ಪ್ರಕಾಶರುತಮ್ಮ ಹೆಸರನ್ನು ನೋಂದಾಯಿಸುವಂತೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರು ತಿಳಿಸಿದ್ದಾರೆ.

ಹಂಪಿ ಉತ್ಸವವನ್ನು ಫೆಬ್ರುವರಿ 2,3 ಮತ್ತು 4ರಂದು ಅದ್ದೂರಿಯಾಗಿ ಏರ್ಪಡಿಸಲಾಗಿದ್ದು, ಇಲ್ಲಿ ವಿವಿಧ ಮಳಿಗೆಗಳನ್ನು ಸಿದ್ಧಪಡಿಸಿ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಉತ್ಸವದ ಅಂಗವಾಗಿ ಪುಸ್ತಕಗಳ ಮಳಿಗೆಗಳನ್ನು ತೆರೆಯಲಾಗುತ್ತಿದ್ದು, ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಪ್ರಕಾಶಕರಿಗೆ ಅವಕಾಶ ಕಲ್ಪಿಸಲಾಗಿದೆ.

**ನಿಬಂಧನೆಗಳು:** ಪ್ರತಿ ಪುಸ್ತಕ ಮಳಿಗೆಗೆ ಒಂದು ಶಾಮಿಯಾನ ಹಾಗೂ ಎರಡು ಮೇಜುಗಳನ್ನು ಒದಗಿಸಲಾಗುವುದು. ಹೆಚ್ಚಿನ ಮೇಜುಗಳಿಗೆ ಮುಂಚಿತವಾಗಿ ಬೇಡಿಕೆ ಸಲ್ಲಿಸುವುದು.ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಆರ್ಥಿಕ, ಸಾಮಾಜಿಕ, ವೈಜ್ಞಾನಿಕ,ಸಂಶೋಧನೆ, ಜನಪದ ಸಾಹಿತ್ಯ, ಪ್ರವಾಸ, ಹವ್ಯಾಸ ಮುಂತಾದ ಪ್ರಾಕಾರಗಳ ಪುಸ್ತಕಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಬಹುದು.ಯಾವುದೇಕಾರಣಕ್ಕೂ ಕೆಟ್ಟ ಅಭಿರುಚಿಯನ್ನು ಬೆಳೆಸುವ, ಜನರ ಮಧ್ಯೆ ವಿರಸ ಮೂಡಿಸುವ, ದೇಶದ ಐಕ್ಯತೆ ಹಾಗೂ ಸಾಮರಸ್ಯಕ್ಕೆ ಧಕ್ಕೆ ತರುವ ಹಾಗೂ ನಿಷೇಧಿತ ಪುಸ್ತಕಗಳನ್ನು ಪ್ರದರ್ಶಿಸಿ ಮಾರಾಟ ಮಾಡುವಂತಿಲ್ಲ. ದೇಶದ ಕಾನೂನು ಬದ್ಧವಾಗಿ ಪ್ರಕಟವಾಗಿರುವ ಪುಸ್ತಕಗಳನ್ನು ಮಾತ್ರ ಪ್ರದರ್ಶನಕ್ಕಿಟ್ಟು ಮಾರಾಟ ಮಾಡಬಹುದು.

ಪುಸ್ತಕ ಪ್ರದರ್ಶನ ಹಾಗೂ ಮಾರಾಟ ಮಾಡುವ ಪ್ರಕಾಶಕರು ಜ. 25ರೊಳಗೆ ಅಧಿಕಾರಿಗಳ ಬಳಿ ಸೂಕ್ತ ಠೇವಣಿಯನ್ನು ಪಾವತಿಸಿ ತಮ್ಮ ಹೆಸರನ್ನು ನೋಂದಾಯಿಸಬೇಕು.ಹೆಚ್ಚಿನ ಮಾಹಿತಿಗಾಗಿ ಹಾಗೂ ನೋಂದಾಣಿಗಾಗಿ ಜಿಲ್ಲಾಗಂಥಾಲಯ ಅಧಿಕಾರಿಗಳು, ವಿಜಯನಗರಜಿಲ್ಲೆ, ಹೊಸಪೇಟೆ ದೂರವಾಣಿ ಸಂಖ್ಯೆ: 7795328559, ವಿನೋದ ಮೊ.ಸಂ: 8123890903, ಬಳ್ಳಾರಿ/ವಿಜಯನಗರ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಫಾಲಾಕ್ಷ ಟಿ. ಮೊ.ಸಂ: 8861128848, 8310969813 ಹಾಗೂ ಚಿತ್ತವಾಡಿಗಿಯ ಸರ್ಕಾರಿ ಪದವಿ ಪೂರ್ವಕಾಲೇಜಿನ ಪ್ರಾಚಾರ್ಯರು ಹಾಗೂ ನೋಡಲ್ ಅಧಿಕಾರಿಗಳಾದ ನಾಗರಾಜ್ ಹವಾಲ್ದಾರ್ ಮೊ.ಸಂ: 8197123522ಗೆ ಸಂಪರ್ಕಿಸಬಹುದಾಗಿದೆ.

## ಜ.19 ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ

**ಹಂಪಿ ಟೈಮ್ಸ್ ಬಳ್ಳಾರಿ**

ಯುವಜನ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು, ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಜ.19 ರಂದು ಜಿಲ್ಲಾ ಪ್ರವಾಸ ಕೈಗೊಳ್ಳುವರು. ಜ.19 ರಂದು ಬೆಳಿಗ್ಗೆ 09 ಗಂಟೆಗೆ ತಂಬ್ರಹಳ್ಳಿಯ ಮುದಿ ಮಲ್ಲೇಶ್ವರ ದೇವಸ್ಥಾನಕ್ಕೆ ಭೇಟಿ. ನಂತರ ದಾಸರನಾಗೇನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸುವರು. ತಂಬ್ರಹಳ್ಳಿ ಗ್ರಾಮದ ಸಾರ್ವಜನಿಕರಿಂದ ಅಹವಾಲು ಸ್ವೀಕಾರ. ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬ್ಯಾಲಚಿಂತೆ ಗ್ರಾಮದಲ್ಲಿ ಸಾರ್ವಜನಿಕರ ಭೇಟಿ ಅಹವಾಲು ಸ್ವೀಕರಿಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.




## ವಚನ ಅರಿವು

# ಒಬ್ಬನೇ ದೇವರು

**ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ,**

**ಒಬ್ಬನೇ ಕಾಣಿರೊ, ಇಬ್ಬರೆಂಬುದು ಹುಸಿ ನೋಡಾ!**

**ಕೂಡಲಸಂಗಮದೇವನಲ್ಲದಿಲ್ಲವೆಂದಿತ್ತು ವೇದ.**

**– ಬಸವಣ್ಣ**


ಬಹುದೇವತೆಗಳನ್ನು ಆರಾಧನೆ ಮಾಡುವುದು ಜನ ಸಮುದಾಯಗಳಲ್ಲಿ ನೆಲೆನಿಂತ ಪದ್ಧತಿಯಾಗಿದೆ. ಇದಕ್ಕೆ ವಿರುದ್ಧವಾಗಿ ಬಸವಣ್ಣ ಏಕದೇವೋಪಾಸನೆಯನ್ನು ಹೇಳುತ್ತಾನೆ. ಅದರಲ್ಲೂ ವಿಗ್ರಹ ರೂಪದ ದೇವರನ್ನು ನಿರಾಕರಿಸಿ ಚೈತನ್ಯಾತ್ಮಕ ದೈವದ ಪರಿಕಲ್ಪನೆಯನ್ನು ಕೊಡುತ್ತಾನೆ. ಇದು ಒಂದು ಬಗೆಯ ಪ್ರಕೃತಿನಿಷ್ಠ ಸಹಜ ದೈವ. ಇಬ್ಬರು, ಮೂವರು ಬ್ರಹ್ಮ, ವಿಷ್ಣು, ಮಹೇಶ್ವರ ಮುಂತಾದ ಮುಕ್ಕೋಟಿ ದೇವರುಗಳ ಕಲ್ಪನೆಯನ್ನು ತಿರಸ್ಕರಿಸುತ್ತ ಈ ಜಗತ್ತಿನ ಅರಿವು ದೇವರಾಗಿದೆ. ಹಾಗಾಗಿ ಇಷ್ಟಲಿಂಗವೆಂಬ ಪರಿಕಲ್ಪನೆಯನ್ನು ನೀಡಿ, ಅದರ ಮೂಲಕ ಮನುಷ್ಯ ತನ್ನ ಅರಿವನ್ನು ಜಾಗೃತ ಮಾಡಿಕೊಳ್ಳಬೇಕು ಎನ್ನುತ್ತಾನೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಹಂಪಿ ಪ್ರವಾಸ ಅನುಭವ

### ಪ್ರವಾಸಿ ತಾಣ ಹಂಪಿಯಲ್ಲಿ ಹಿರಿಯ ನಾಗರಿಕರಿಗೆ ಸೌಲಭ್ಯ ಹೆಚ್ಚಲಿ

ಹಂಪಿ ನಮ್ಮ ದೇಶದ ಹೆಮ್ಮೆಯ ಐತಿಹಾಸಿಕ ಪ್ರವಾಸಿ ತಾಣ. ಇದು ಅಷ್ಟೇ ಜಗತ್ಪ್ರಸಿದ್ಧವು ಕೂಡ ಇಲ್ಲಿಯ ಶ್ರೀ ವಿರೂಪಾಕ್ಷ ದೇವಾಲಯ ಕಲ್ಲಿನ ರಥ ಮತ್ತು ಹಜಾರರಾಮಸ್ವಾಮಿ ದೇವಸ್ಥಾನ ನೋಡಲು ಎರಡು ಕಣ್ಣುಗಳು ಸಾಲವು.ಇತ್ತೀಚಿಗೆ



ನಾನು ಮತ್ತು ನನ್ನ ಸ್ನೇಹಿತರು ಬಹಳ ವರ್ಷಗಳ ನಂತರ ಸುಂದರ ನಗರ ಹಂಪಿಯನ್ನು ನೋಡಲು ಹೋಗಿದ್ದೆವು. ಚಿಕ್ಕಂದಿನಿಂದ ನೋಡಿದ ಹಂಪಿಯನ್ನು ಎಷ್ಟೋ ವರ್ಷಗಳ ನಂತರ ಸ್ನೇಹಿತರೊಡನೆ ನೋಡುವ ಸಂಭ್ರಮವೇ ಬೇರೆ. ನಾನು ಮತ್ತು ನನ್ನ ಸ್ನೇಹಿತರು ಬೇರೆ ಬೇರೆ ಹುದ್ದೆಗಳಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದ ಹಿರಿಯ ನಾಗರೀಕರು. ಎಂದಿನಂತೆ ಹಂಪಿ ಪ್ರವಾಸಿಗರಿಂದ ತುಂಬಿತುಳುಕುತ್ತಿತ್ತು. ಶೈಕ್ಷಣಿಕ ಪ್ರವಾಸಕ್ಕೆ ಬಂದ ಮಕ್ಕಳ ಕಲರವ, ಅಯ್ಯಪ್ಪ ಭಕ್ತರಿಂದ ತುಂಬಿದ ನದಿ ತೀರದ ಸ್ನಾನದ ಘಟ್ಟ, ಹೀಗೆ ಕಣ್ಣಗಲಕ್ಕೂ ಪ್ರವಾಸಿಗರು. ಮೊದಲಿಗಿಂತ ಈಗ ನಮ್ಮ ದೇಶದ ಎಲ್ಲಾ ಪ್ರವಾಸಿ ತಾಣಗಳು ಐತಿಹಾಸಿಕ ಸ್ಥಳಗಳು ತುಂಬಾ ಚೆನ್ನಾಗಿ ಅಭಿವೃದ್ಧಿ ಹೊಂದಿವೆ. ಹಂಪಿಯಲ್ಲೂ ಸಹ ತುಂಬಾ ಬದಲಾವಣೆಗಳಾಗಿವೆ. ಇಲ್ಲಿಯ ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಶೌಚಾಲಯ ನಿರ್ವಹಣೆ ಶ್ಲಾಘನೀಯ. ಇನ್ನು ಕೆಲವು ಬದಲಾವಣೆಗಳನ್ನು ಮಾಡಿದರೆ ಹಿರಿಯ ನಾಗರಿಕರಿಗೆ ಮತ್ತು ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ.

**ಬೇಕಿದೆ ಸೌಕರ್ಯ:** ಬಸ್ ನಿಲ್ದಾಣದ ಪಾರ್ಕಿಂಗ್ ಸ್ಥಳದಲ್ಲೇ ಖಾಸಗಿ ವಾಹನಗಳ ನಿಲುಗಡೆ ಮಾಡಲಾಗುತ್ತದೆ. ಮಕ್ಕಳು, ಹಿರಿಯ ನಾಗರೀಕರು ಸೇರಿದಂತೆ ವಯೋವೃದ್ಧರು ನಿಲ್ದಾಣದಿಂದ ಶ್ರೀ ವಿರೂಪಾಕ್ಷ ದೇವಸ್ಥಾನದವರೆಗೆ ನಡೆಯಲು ಏದುಸಿರು ಬಿಡುತ್ತಾರೆ. ವಾಹನ ನಿಲ್ದಾಣದಿಂದ ವಿರೂಪಾಕ್ಷ ದೇವಾಲಯಕ್ಕೆ ಬ್ಯಾಟರಿ ಚಾಲಿತ ವಾಹನಗಳನ್ನು ವ್ಯವಸ್ಥೆ ಕಲ್ಪಿಸಬೇಕು. ಸ್ಮಾರಕಗಳ ವೀಕ್ಷಣೆಗೆ ಪಡೆಯುವ ಒಂದೇ ಟಿಕೆಟ್‌ನಲ್ಲಿ ಎಲ್ಲಾ ಸ್ಮಾರಕಗಳನ್ನು ವೀಕ್ಷಿಸಬಹುದು ಎಂದು ಪ್ರವಾಸಿಗಳಿಗೆ ಮಾರ್ಗದರ್ಶಕರಿಂದ ಅಥವಾ ಧ್ವನಿಮುದ್ರಿತ ಪ್ರಸಾರ ನಿರಂತರವಾಗಿರಬೇಕು. ಕಲ್ಲಿನ ರಥ ಮತ್ತು ಅಜಾರ ರಾಮಸ್ವಾಮಿ ದೇವಾಲಯಕ್ಕೆ ಹೋಗುವ ರಸ್ತೆಯ ಹಂಪಿಯ ಮುಖ್ಯರಸ್ತೆಯಂತೆ ಡಾಂಬರೀಕರಣ ಮಾಡಿ ಧೂಳಿನ ಸಮಸ್ಯೆ ದೂರಾಗಿಸಬೇಕೆಂದು ಸಂಬಂಧಿಸಿದ ಪ್ರಾಧಿಕಾರ ಮತ್ತು ಜಿಲ್ಲಾಧಿಕಾರಿಗಳಲ್ಲಿ ವಿನಂತಿಸುತ್ತೇನೆ.

**– ವೀರಭದ್ರಸ್ವಾಮಿ,** ಬೆಂಗಳೂರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

M: 9448633038

ಎಲ್ಲದಕ್ಕೂ ಹಳಹಳಿಸುವ, ತಮ್ಮೆಲ್ಲ ಸಮಸ್ಯೆಗಳಿಗೂ ತಮ್ಮ ಪರಿಸರವನ್ನು, ಪಾಲಕರನ್ನು ಶಾಲೆ ಕಾಲೇಜುಗಳನ್ನು ದೂಷಿಸುವ ವಿದ್ಯಾರ್ಥಿಗಳ ಮಧ್ಯದಲ್ಲಿ ಅತ್ಯಂತ ಬಡತನದ ಪರಿಸ್ಥಿತಿಯಲ್ಲಿ ಸಾಧನೆ ಮಾಡಿ ತೋರಿಸಿದ ಮನೋಜ್ ಕುಮಾರ .... ಕಾರ್ಗತ್ತಲ ಬದುಕಿನಲ್ಲಿ ಬೆಳಕಿನ ಭರವಸೆ ಮೂಡಿಸುವವರು.

### 12ತ್‌ಫೇಲ್ (ನಿಜ ಜೀವನ ಕಥನ)

# ಕಾರ್ಗತ್ತಲ ನಡುವೆ ಭರವಸೆಯ ಬೆಳಕು

ಡಕಾಯಿತರಿಗೆ ಹೆಸರಾದ ಚಂಬಲ್ ಕಣಿವೆಯ ಪುಟ್ಟ ಹಳ್ಳಿ ಬಿಲಗಾ0ವ್. ನಾಗರಿಕತೆಯ ಗಂಧಗಾಳಿ ಸೋಕದ ಆ ಊರಿನಲ್ಲಿ ಪರೀಕ್ಷೆಯಲ್ಲಿ ನಕಲು ಮಾಡಿಸಿ ಮಕ್ಕಳನ್ನು ಮುಂದಿನ ತರಗತಿಗೆ ಕಳುಹಿಸುವ ಪರಿಪಾಠ ಯಾವುದೇ ಎಗ್ಗಿಲ್ಲದೆ ಆಡಳಿತ ಯಂತ್ರದ ಸಹಾಯದಿಂದ ನಡೆದು ಬಂದಿತ್ತು. ಅಂತೆಯೇ ಪಿಯುಸಿ ಎರಡನೇ ವರ್ಷದ ಪರೀಕ್ಷೆಗೆ ಆ ಊರಿನ ಮನೋಜ್ ಕುಮಾರ್ ಕಾಪಿ ಚೀಟಿಗಳೊಂದಿಗೆ ತಯಾರಾಗಿ ಕಾಲೇಜಿಗೆ ಬಂದಿದ್ದನು. ಇನ್ನೇನು ಪರೀಕ್ಷೆ ಪ್ರಾರಂಭವಾಯಿತು ಎಂಬಷ್ಟರಲ್ಲಿ ಅಲ್ಲಿಗೆ ಹೊಸದಾಗಿ ವರ್ಗವಾಗಿ ಬಂದಿದ್ದ ಪೊಲೀಸ ಅಧಿಕಾರಿ ದುಶ್ಯಂತ್ ಸಿಂಗ್ ದಾಳಿ ಮಾಡಿ ಎಲ್ಲರ ಬಳಿ ಇದ್ದ ಕಾಪಿ ಚೀಟಿಗಳನ್ನು ಕಸಿದರು. ಯಾರ ಪ್ರಲೋಭನೆ ಮತ್ತು ಪ್ರತಿರೋಧಕ್ಕೆ ಅವರು ಮಣಿಯದೆ ಹೋದುದರ ಪರಿಣಾಮವಾಗಿ ಆ ವರ್ಷ ಎಲ್ಲ ಮಕ್ಕಳು ಪಿಯುಸಿ ಪರೀಕ್ಷೆಯಲ್ಲಿ ಫೇಲಾದರು.

ಅತ್ಯಂತ ಪ್ರಾಮಾಣಿಕ ಮತ್ತು ಹೋರಾಟಗಾರನಾದ ಮನೋಜ್ ನ ತಂದೆ ತಮ್ಮ ನೌಕರಿಯ ಉಳಿವಿಗಾಗಿ ಕೋರ್ಟು ಕಚೇರಿಗಳಿಗೆ ಎಡತಾಕುತ್ತಿದ್ದರೆ ಇತ್ತ ಮನೋಜ್ ಮತ್ತು ಆತನ ಅಣ್ಣ ಊರಿಂದ ಊರಿಗೆ ಜನರನ್ನು ಸಾಗಿಸಲು ಬಳಸುವ ಟ್ರಕ್ ಗಳನ್ನು ಬಾಡಿಗೆಗೆ ಪಡೆದು ಓಡಿಸಲಾರಂಭಿಸಿದರು. ಆದರೆ ಊರಿನ ಮುಖ್ಯಸ್ಥನ ಸಾರಿಗೆ ವ್ಯವಹಾರಕ್ಕೆ ಇದರಿಂದ ತೊಂದರೆ ಉಂಟಾಗಿ ಸುಳ್ಳು ಕೇಸ್ ಹಾಕಿ ಸೋದರರಿಬ್ಬರನ್ನು ಒಳಗೆ ತಳ್ಳಿದರು. ಮಾತು ವಿವಾದಕ್ಕೆಳಸಿದಾಗ ಮನೋಜನನ್ನು ಹೊರಹಾಕಿದ ಠಾಣೆಯ ಅಧಿಕಾರಿ ಅದಾರನ್ನು ನಿನ್ನ ಬೆಂಬಲಕ್ಕೆ ಕರೆದುಕೊಂಡು ಬರುತ್ತೀಯಾ ನೋಡುತ್ತೇನೆ ಎಂದು ಬೆದರಿಕೆ ಹಾಕಿದನು.

ಮನೆಗೆ ಹೋಗಿ ಬಂದೂಕು ತರಲು ಓಡುತ್ತಿದ್ದ ಮನೋಜ್ ಕುಮಾರ್ ಮಾರ್ಗ ಮಧ್ಯದಲ್ಲಿ ಮನಸ್ಸು ಬದಲಾಯಿಸಿ ಪ್ರಾಮಾಣಿಕ ಪೊಲೀಸ್ ಅಧಿಕಾರಿಯ ಮನೆಗೆ ನಡುರಾತ್ರಿಯಲ್ಲಿ ಬಂದು ಬಾಗಿಲು ತಟ್ಟಿದನು. ಕೊಂಚ ಬೇಸರದಿಂದಲೇ ಆತನ ಅಹವಾಲು ಕೇಳಿದ ಪೊಲೀಸ ಅಧಿಕಾರಿ ದುಶಾಂತ್ ಸಿಂಗ್ ಕೂಡಲೇ ಪೊಲೀಸ್ ಠಾಣೆಗೆ ಬಂದು ಆತನ ಸಹೋದರನನ್ನು ಬಿಡಿಸಿದರಲ್ಲದೇ ಅವರಿಬ್ಬರನ್ನು ಮನೆಯವರೆಗೆ ಬಿಟ್ಟರು. ಆಗ ಮನೋಜ್ ಕುಮಾರ್ ಅವರಂತೆ ತಾನು ಕೂಡ ಆಗಬೇಕೆಂದರೆ ಏನು ಮಾಡಬೇಕು ಎಂದು ಪ್ರಶ್ನಿಸಿದಾಗ ಪ್ರಾಮಾಣಿಕತೆ ನಿನ್ನ ಬದುಕಿನ ಗುರಿಯಾಗಲಿ ಎಂದು ಹೇಳಿದರು. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡ ಮನೋಜ್ ಅತ್ಯಂತ ಶ್ರದ್ಧೆಯಿಂದ ಎರಡನೇ ಪಿಯುಸಿ ಓದಿ ಪರೀಕ್ಷೆಯಲ್ಲಿ ನಕಲು ಮಾಡದೆ ಮೂರನೇ ದರ್ಜೆಯಲ್ಲಿ ಪಾಸಾದನು. ಮುಂದೆ ಪದವಿ ಪೂರೈಸಿದ ಆತ ಪೊಲೀಸ್ ನೌಕರಿಗೆ ಬೇಕಾದ ಅರ್ಹತಾ ತರಬೇತಿ ಪಡೆಯಲು ರಾಜಧಾನಿಗೆ ಬಂದನು. ನಗರಕ್ಕೆ ಬಂದಾಗಲೇ ಆತನ ಅರಿವಿಗೆ ಬಂದದ್ದು ಆತನ ಹಣ ಮತ್ತು ಬಟ್ಟೆಗಳಿದ್ದ ಪೆಟ್ಟಿಗೆಯನ್ನು ಯಾರೋ ಎಗರಿಸಿದ್ದಾರೆ ಎಂದು.

ಅಜ್ಜಿಯ ಬಹುಕಾಲದ ಉಳಿತಾಯದ ಪೆನ್ಷನ್ ಹಣ ಕಳೆದುಕೊಂಡು ಮನೆಗೆ ಹೋಗಲು ಇಚ್ಚಿಸದ ಮನೋಜ್ ಹೊಟ್ಟೆ ಹಸಿವಿನಿಂದ ಬಳಲುತ್ತಿದ್ದರೂ ಆತನ ಸ್ವಾಭಿಮಾನ ಭಿಕ್ಷೆ ಬೇಡಲು ಅವಕಾಶ ನೀಡಲಿಲ್ಲ. ಕೊನೆಗೆ ತಡೆಯಲಾರದೆ ಏನಾದರೂ ಕೆಲಸ ಮಾಡುವೆ ಊಟ ಕೊಡಿ ಎಂದು ಹೋಟೆಲೊಂದರ ಮಾಲೀಕನಿಗೆ ಕೇಳಿಕೊಂಡನು. ಆ ಸಮಯದಲ್ಲಿಯೇ ಆತನಿಗೆ ಭೇಟಿಯಾದ ಪಾಂಡೆ ಎಂಬ ಓರ್ವ ವ್ಯಕ್ತಿ ಆತನ ಬದುಕಿನ ದಾರಿಯನ್ನೇ ಬದಲಿಸಿದನು. ತಾನು ಯುಪಿಎಸ್ ಪರೀಕ್ಷೆ ಗೆ ತರಬೇತಿ ಪಡೆಯಲು ದೆಹಲಿಗೆ ಹೋಗುತ್ತಿರುವುದಾಗಿ ಆತ ಹೇಳಿದಾಗ ತನ್ನನ್ನು ಕೂಡ ಆತನೊಂದಿಗೆ ಕರೆದೊಯ್ಯಲು ಕೇಳಿಕೊಂಡನು. ಅಂತೆಯೇ ಅವರಿಬ್ಬರೂ ದೆಹಲಿಯ ರೈಲು ಹತ್ತಿದರು.

ದೆಹಲಿಯಲ್ಲಿ ಸ್ನೇಹಿತ ಪಾಂಡೆಯ ಮನೆಯಲ್ಲಿಯೇ ಉಳಿದ ಮನೋಜ್ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಾ ಈಗಾಗಲೇ ಯುಪಿಎಸ್ಸಿ ಪರೀಕ್ಷೆ ಬರೆದು ಅನುಭವಗಳಿಸಿದ ಗೌರಿ ಭಯ್ಯಾ ಎಂಬಾತನ ಬಳಿ ತರಬೇತಿ ಪಡೆಯುತ್ತಾನೆ. ನಂತರ ವಾಚನಾಲಯ ಒಂದರಲ್ಲಿ ಕೆಲಸಗಾರನಾಗಿ ಸೇರಿಕೊಂಡು ಹಗಲು ಹೊತ್ತಿನಲ್ಲಿ ವಾಚನಾಲಯದ ಕಾರ್ಯನಿರ್ವಹಿಸುತ್ತಾ ರಾತ್ರಿ ಹೊತ್ತಿನಲ್ಲಿ ಯುಪಿಎಸ್ಸಿ ಪರೀಕ್ಷೆಗೆ ತಯಾರಿಗಾಗಿ ಓದಲು ಆರಂಭಿಸುತ್ತಾನೆ. ಮೊದಲ ಪ್ರವೇಶ ಪರೀಕ್ಷೆಯಲ್ಲಿ ಪಾಸಾದ ಮನೋಜ್ ಕುಮಾರ್ ಖಾಸಗಿ ಕೋಚಿಂಗ್ ಸೆಂಟರ್ ನಲ್ಲಿ



**ವೀಣಾ ಹೇಮಂತಗೌಡ ಪಾಟೀಲ್,**
**ಮುಂಡರಗಿ, ಗದಗ**


ಸೇರಿಕೊಳ್ಳುತ್ತಾನೆ. ಆದರೆ ಇಂಗ್ಲೀಷ್ ನ ಪ್ರಶ್ನೆ ಒಂದನ್ನು ತಪ್ಪಾಗಿ ಅರ್ಥೈಸಿಕೊಂಡು ಉತ್ತರಿಸಿದ ಕಾರಣ ಆ ವರ್ಷದ ಪರೀಕ್ಷೆಯಲ್ಲಿ ಫೇಲ್ ಆಗುತ್ತಾನೆ. ಇದೇ ಸಮಯದಲ್ಲಿ ಮಸೂರಿಯಂದ ಯುಪಿಎಸ್ಸಿ ಪರೀಕ್ಷೆ ಬರೆಯಲು ಬಂದ ಶ್ರದ್ಧಾ ಎಂಬ ಯುವತಿಯ ಪರಿಚಯ ಸ್ನೇಹ, ಪ್ರೀತಿಗೆ ತಿರುಗುತ್ತದೆ. ಆದರೆ ಅತ್ಯಂತ ಕಡು ಬಡತನದ ಪರಿಸ್ಥಿತಿಯಲ್ಲಿ ಒಂದು ದಿನ ತಾನು ಮಾಡಿದ ತಪ್ಪಿಗೆ ವಾಚನಾಲಯದ ಮಾಲೀಕ ನಿಂದನೆ ಮಾಡಿದಾಗ ಆತನ ಮೇಲೆ ಸಿಟ್ಟಿಗೆದ್ದ ಮನೋಜ್ ನನ್ನು ಕೆಲಸದಿಂದ ತೆಗೆದು ಹಾಕುತ್ತಾರೆ.

**ದಿನದ 16 ಗಂಟೆ ಕೆಲಸ ಮಾಡುತ್ತಾ ರಾತ್ರಿ ಎಲ್ಲಾ ಓದಲು ಮೀಸಲಿಡುತ್ತಿದ್ದ ಮನೋಜ್ ಕೇವಲ ಮೂರು ಗಂಟೆ ಮಾತ್ರ ಮಲಗುತ್ತಿದ್ದ.**

ಮುಂದೆ ಆತನ ಸ್ನೇಹಿತ ಪಾಂಡೆ ಆತನನ್ನು ಹುಡುಕುತ್ತಾ ಬಂದಾಗ ದೆಹಲಿಯ ಕೊಳಗೇರಿಯೊಂದರ ಕಿರಿದಾದ ಗಲ್ಲಿಯ ಹಿಟ್ಟಿನ ಗಿರಣಿಯಲ್ಲಿ ಆತ ಸಿಗುತ್ತಾನೆ. ತಲೆಯೆತ್ತಿದರೆ ಸೂರು ತಲೆಗೆ ಬಡಿಯುವ, ಹಿಟ್ಟಿನ ಗಿರಣಿಯ ಶಬ್ದ, ಗಾಳಿ ಬೆಳಕು ಕಿಟಕಿ ಬಾಗಿಲುಗಳ ಸರಿಯಾದ ವ್ಯವಸ್ಥೆ ಇಲ್ಲದ ಆ ಕೋಣೆಯಲ್ಲಿ ಮನೋಜ್ ವಾಸಿಸುತ್ತಿದ್ದನು. ದಿನದ 16 ಗಂಟೆ ಕೆಲಸ ಮಾಡುತ್ತಾ ರಾತ್ರಿ ಎಲ್ಲಾ ಓದಲು ಮೀಸಲಿಡುತ್ತಿದ್ದ ಮನೋಜ್ ಕೇವಲ ಮೂರು ಗಂಟೆ ಮಾತ್ರ ಮಲಗುತ್ತಿದ್ದ.

ಆದರೂ ಮೊದಲ ಮೂರು ಪ್ರಯತ್ನಗಳು ವಿಫಲವಾದವು. ನಾಲ್ಕನೇ ಪ್ರಯತ್ನದಲ್ಲಿ ಶತಾಯಗತಾಯ ಆತ ಪಾಸಾಗಲೇಬೇಕಿತ್ತು. ಅದರ ಮೊದಲ ಹಂತವಾಗಿ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಪಾಸಾದ ಮನೋಜ್ ಕುಮಾರನನ್ನು ಗೌರಿ ಭಯ್ಯಾ ತನ್ನ ಕೋಣೆಗೆ ಕರೆತಂದು ಅಲ್ಲಿ ಎಲ್ಲ ರೀತಿಯ ಓದುವ ಮತ್ತು ಊಟದ ವ್ಯವಸ್ಥೆಯನ್ನು ಮಾಡುತ್ತಾನೆ. ಇದನ್ನು ಒಪ್ಪದ ಕಡು ಸ್ವಾಭಿಮಾನಿ ಮನೋಜನಿಗೆ.... ನಮ್ಮಂತಹ ಕೆಳ ವರ್ಗದ ಒಬ್ಬ ವಿದ್ಯಾರ್ಥಿಯ ಗೆಲುವು ಅದೆಷ್ಟೋ ಲಕ್ಷ ಜನರ ಕನಸಿಗೆ ದಾರಿಯಾಗುತ್ತದೆ ನಾವು ಕೂಡ ಆಡಳಿತದ ಮುಖ್ಯ ವಾಹಿನಿಯಲ್ಲಿ ಇದ್ದರೆ ನಮ್ಮವರ ಅಜ್ಞಾನ, ಬಡತನ, ದಾರಿದ್ರ್ಯಗಳು ತೀರಿ ಹೋಗುತ್ತವೆ. ನಿನ್ನ ಒಬ್ಬನ ಪ್ರಯತ್ನದ ಫಲಿತಾಂಶ ಕಾರ್ಗತ್ತಲೆಯ ಹಾದಿಯಲ್ಲಿ ಸಾಗುತ್ತಿರುವ ಲಕ್ಷಾಂತರ ವಿದ್ಯಾರ್ಥಿಗಳ ಬಾಳಿಗೆ ದಾರಿ ದೀಪವಾಗುತ್ತದೆ ಎಂದು ತಿಳಿ ಹೇಳುತ್ತಾನೆ. ಈಗಾಗಲೇ ಯು ಪಿ ಎಸ್ ಸಿ ಪರೀಕ್ಷೆಯಲ್ಲಿ ಪಾಸಾಗಿ ಜಿಲ್ಲಾಧಿಕಾರಿಯಾಗಿ ನೇಮಕವಾಗಿದ್ದ ಸ್ನೇಹಿತೆ ಶ್ರದ್ಧಾ ಆತನಿಗೆ ಒತ್ತಾಸೆಯಾಗಿ ನಿಲ್ಲುತ್ತಾಳೆ. ಹಲವಾರು ಸಂಕಷ್ಟಗಳ ನಡುವೆಯೇ ಓದಿದ ಮನೋಜ್ ಕುಮಾರ್ ಈ ಬಾರಿ ಯುಪಿಎಸ್ ಯ ಅಂತಿಮ ಪರೀಕ್ಷೆಯಲ್ಲಿ ಪಾಸಾಗುತ್ತಾನೆ.

ಮುಂದಿರುವುದು ಮೌಖಿಕ ಪರೀಕ್ಷೆ. ಹಲವಾರು ವಿವಿಧ ಉನ್ನತ ಹುದ್ದೆಗಳಲ್ಲಿರುವ ಅಧಿಕಾರಿಗಳ ಮುಂದೆ ಸಂದರ್ಶನಕ್ಕೆ ಮನೋಜ್ ಕುಮಾರ್ ಹಾಜರಾಗುತ್ತಾನೆ. ಈತನ ಸರ್ಟಿಫಿಕೇಟ್ಗಳನ್ನು ಪರಿಶೀಲಿಸಿದ ಅಧಿಕಾರಿಗಳು ಆತ ಪಿಯುಸಿಯಲ್ಲಿ ಫೇಲಾಗಲು ಕಾರಣವೇನು ಎಂದು ಕೇಳಿದಾಗ ನಕಲು ಮಾಡುವುದು ತಪ್ಪು ಎಂಬುದರ ಅರಿವೇ ಇಲ್ಲದ ತನ್ನ ಕುಗ್ರಾಮದ ಸ್ಥಿತಿಯನ್ನು ಹೇಳುತ್ತಾನೆ. ಬೇರೆ ಏನಾದರೂ ನೆವ ಹೇಳಬಹುದಿತ್ತಲ್ಲ ಎಂಬ ಪ್ರಶ್ನೆಗೆ ಸುಳ್ಳು ಹೇಳಲು ಮನಸ್ಸಾಗುತ್ತಿಲ್ಲ... ಪ್ರಾಮಾಣಿಕವಾಗಿ ಇಲ್ಲಿಯವರೆಗೂ ನಡೆದು ಬಂದಿರುವ ಕಾರಣ ಮೌಖಿಕ ಪರೀಕ್ಷೆಯಲ್ಲಿ ಪಾಸಾಗಲೇಬೇಕೆಂಬ ಆಶಯದಿಂದ ಸುಳ್ಳು ಹೇಳಲು ಮನಸ್ಸಾಕ್ಷಿ ಒಪ್ಪುತ್ತಿಲ್ಲ ಎಂಬ ಆತನ ಉತ್ತರ ಕೊಂಚ ಕಟು ಎನಿಸಿದರು... ಆತ ಸಂದರ್ಶನ ಕೊಠಡಿ ಇಂದ ತೆರಳಿದ ಬಳಿಕ ಇಂತಹ ಪ್ರಾಮಾಣಿಕ ವ್ಯಕ್ತಿಗಳೇ ಇಂದಿನ ವ್ಯವಸ್ಥೆಗೆ ಬೇಕು ಎಂಬ ಕಾರಣದಿಂದ ಆತನ ಆಯ್ಕೆ ಆಗುತ್ತದೆ.



ಸಂದರ್ಶನ ಕೊಠಡಿಯಲ್ಲಿ ಅಧಿಕಾರಿಗಳು ತನ್ನೊಂದಿಗೆ ವರ್ತಿಸಿದ ರೀತಿ ಮತ್ತು ತನ್ನ ಸಂದರ್ಶನ ವೇಸ್ಟ್ ಆಫ್ ಟೈಮ್ ಎಂದು ಹಿರಿಯ ಸಂದರ್ಶಕರು ಹೇಳಿದ ಮಾತು ಇನ್ನೂ ಮನೋಜನ ಕಿವಿಯಲ್ಲಿ ಗುನುಗುನಿಸುತ್ತಿರುತ್ತದೆ. ಆದ್ದರಿಂದಲೇ ಫಲಿತಾಂಶ ನೋಡುವ ಆಸಕ್ತಿಯನ್ನು ಕಳೆದುಕೊಂಡಿದ್ದನಾತ. ಒತ್ತಾಯವಾಗಿ ಆತನನ್ನು ಅಲ್ಲಿಗೆ ಸ್ನೇಹಿತೆ ಶ್ರದ್ಧಾ ಮತ್ತು ಗೌರಿ ಭಯ್ಯಾ ಮತ್ತು ಆತನಿಗೆ ಅಡುಗೆ ಮಾಡಿ ಹಾಕುತ್ತಿದ್ದ ಯುವಕ ಕರೆದೊಯ್ಯುತ್ತಾರೆ. ಫಲಿತಾಂಶ ಪ್ರಕಟಣೆಯ ಬೋರ್ಡ್ ನಲ್ಲಿ ಮನೋಜ್ ಕುಮಾರನ ಹೆಸರನ್ನು ಕಂಡು ಅವರೆಲ್ಲರ ಖುಷಿಗೆ ಪಾರವೇ ಇಲ್ಲದಂತಾಗುತ್ತದೆ. ಗದ್ಗದ ಧ್ವನಿಯಲ್ಲಿ ತನ್ನೂರಾದ ಬಿಲಗಾವ್ ಮನೆಗೆ ಕರೆ ಮಾಡಿ ತಂದೆ ತಾಯಿಗೆ ಈ ವಿಷಯವನ್ನು ತಿಳಿಸುತ್ತಾನೆ ಅಲ್ಲಿಯೂ ಕೂಡ ಸಂತಸ ಹೊನಲಾಗಿ ಹರಿಯುತ್ತದೆ.

ಮುಂದಿನ ಒಂದು ವರ್ಷಕ್ಕೆ ಮನೋಜ್ ಕುಮಾರ್ ಶರ್ಮಾ ಶ್ರದ್ಧಾಳೊಂದಿಗಿನ ತನ್ನ ವಿವಾಹದ ಆಮಂತ್ರಣ ಪತ್ರಿಕೆಯನ್ನು ತೆಗೆದುಕೊಂಡು ಈ ಹಿಂದೆ ತನ್ನ ಬದುಕಿನ ದಿಕ್ಕನ್ನು ಬದಲಾಯಿಸಲು ಕಾರಣರಾದ ಪೊಲೀಸ್ ಅಧಿಕಾರಿ ದುಶ್ಯಂತ್ ಸಿಂಗ್ ರಿಗೆ ನೀಡಿ ಆಶೀರ್ವಾದ ಪಡೆಯುತ್ತಾನೆ. ತಾನು ಹೇಳಿದಂತೆ ಸಾಧನೆಯ ಶಿಖರವೇರಿದ ಮನೋಜ್ ಕುಮಾರ್ ಶರ್ಮನನ್ನು ತಬ್ಬಿಕೊಂಡು ಸಂತಸ ವ್ಯಕ್ತಪಡಿಸುತ್ತಾರೆ ಮತ್ತು ತನಗಿಂತ ಮೇಲಿನ ಹುದ್ದೆಯಲ್ಲಿರುವ ಆತನಿಗೆ ಸೆಲ್ಯೂಟ್ ಹೊಡೆದು ಗೌರವ ಸಲ್ಲಿಸುತ್ತಾರೆ.

ಇದು ಬದುಕಿನ ನಿಜವಾದ ಸಾಧನೆ. ಇದೀಗ ಮಹಾರಾಷ್ಟ್ರ ಪೊಲೀಸ್ ಸೇವೆಯ ಉನ್ನತ ಹುದ್ದೆಯಲ್ಲಿರುವ ಮನೋಜ್ ಕುಮಾರ್ ಶರ್ಮ ಮತ್ತು ರವಿನ್ಯು ಇಲಾಖೆಯ ಉನ್ನತ ಹುದ್ದೆಯಲ್ಲಿರುವ ಅವರ ಪತ್ನಿ ಶ್ರದ್ಧ ಅವರ ಯಶೋಗಾಥೆ ಇದು. ವಿಧು ವಿನೋದ್ ಚೋಪ್ರಾ ನಿರ್ಮಿಸಿರುವ 12ತ್ ಫೈಲ್ ಈ ಚಲನಚಿತ್ರದಲ್ಲಿ ಮನೋಜ್ ಕುಮಾರ್ ಶರ್ಮಾ ಅವರ ಪಾತ್ರದಲ್ಲಿ ವಿಕ್ರಾಂತ್ ಮಸ್ಸಿ ಮತ್ತು ಶ್ರದ್ಧಾ ಅವರ ಪಾತ್ರದಲ್ಲಿ ಮೇಧ ಶಂಕರ್ ಪಾತ್ರವನ್ನು ನಿರ್ವಹಿಸಿದ್ದು ಅನುರಾಗ್ ಪಾಠಕ್ ಅವರು ರಚಿಸಿದ ಮನೋಜ್ ಕುಮಾರ್ ಶರ್ಮಾ ಅವರ ಜೀವನದ ಈ ಯಶೋಗಾಥೆಯನ್ನು ಬರೆದ ಅನುರಾಗ ಪಾಠಕ್ ಚಲನಚಿತ್ರದಲ್ಲಿ ಬರುವ ಪಾಂಡೆ ಆಗಿದ್ದಾರೆ. ಇತ್ತೀಚೆಗೆ ದೆಹಲಿಯಲ್ಲಿ ಸಂದರ್ಶನ ಒಂದರಲ್ಲಿ ಮನೋಜ್ ಕುಮಾರ್ ಶರ್ಮ ತಮ್ಮ ಜೀವನದ ಎಲ್ಲಾ ಆಗುಹೋಗುಗಳಲ್ಲಿ ತಮಗೆ ಬೆಂಬಲ ನೀಡಿದ ಅನುರಾಗ ಪಾಠಕರನ್ನು ತಮ್ಮ ನಿಜವಾದ ಸ್ನೇಹಿತ ಎಂದು ಹೇಳಿಕೊಂಡಿದ್ದಾರೆ. ಮನೋಜ್ ಕುಮಾರ್ ಶರ್ಮಾ ನಮ್ಮ ನಿಮ್ಮೆಲ್ಲರ ನಡುವೆ ಇರುವಂತಹ ವ್ಯಕ್ತಿ, ಅಂತಹ ಸಾಮಾನ್ಯ ವ್ಯಕ್ತಿಅದಮ್ಯ ಶಕ್ತಿಯಾಗಿ ಹೊರಹೊಮ್ಮಲು ಕಾರಣ ಅವರಲ್ಲಿದ್ದ ಛಲ, ಶ್ರದ್ಧೆ ಮತ್ತು ಆತ್ಮವಿಶ್ವಾಸ. ಯುಪಿಎಸ್ಸಿ ಪರೀಕ್ಷೆಯಲ್ಲಿ 121ನೇ ರ್‍ಯಾಂಕ್ ಪಡೆದ ಮನೋಜ್ ಕುಮಾರ್ ಸಾಧನೆ ಅದ್ವಿತೀಯವಾದದು.

ಎಲ್ಲದಕ್ಕೂ ಹಳಹಳಿಸುವ, ತಮ್ಮೆಲ್ಲ ಸಮಸ್ಯೆಗಳಿಗೂ ತಮ್ಮ ಪರಿಸರವನ್ನು,ಪಾಲಕರನ್ನು ಶಾಲೆ ಕಾಲೇಜುಗಳನ್ನು ದೂಷಿಸುವ ವಿದ್ಯಾರ್ಥಿಗಳ ಮಧ್ಯದಲ್ಲಿ ಅತ್ಯಂತ ಬಡತನದ ಪರಿಸ್ಥಿತಿಯಲ್ಲಿ ಸಾಧನೆ ಮಾಡಿ ತೋರಿಸಿದ ಮನೋಜ್ ಕುಮಾರ .... ಕಾರ್ಗತ್ತಲ ಬದುಕಿನಲ್ಲಿ ಬೆಳಕಿನ ಭರವಸೆ ಮೂಡಿಸುವವರು.




# 12 ಗಂಟೆ ಕೆಲಸ ಬದಲಿಗೆ ಮೊದಲಿನಂತೆ 8 ಗಂಟೆಗಳಿಗೆ ಇಳಿಸಲು ಕ್ರಮ

## ಸಂಯುಕ್ತ ಹೋರಾಟ ವೇದಿಕೆಯ ಪದಾಧಿಕಾರಿಗಳು ನಿಯೋಗಕ್ಕೆ ಮುಖ್ಯಮಂತ್ರಿಗಳಿಂದ ಭರವಸೆ

**ಬೆಂಗಳೂರು:** ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯೋಜನಾ ಹಾಗೂ ಮಹಿಳಾ ಸಂಘಟನೆಗಳ ಸಮನ್ವಯ ಸಮಿತಿಯ ನೇತೃತ್ವದ ಸಂಯುಕ್ತ ಹೋರಾಟ ವೇದಿಕೆಯ ಪದಾಧಿಕಾರಿಗಳು ಮತ್ತು ಮುಖಂಡರ ನಿಯೋಗದ ಜತೆ ಸುದೀರ್ಘ ಚರ್ಚೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದುಡಿಯುವ ಸಮುದಾಯಗಳ ಸಮಸ್ಯೆ ಪರಿಹಾರಕ್ಕೆ ಹಲವು ಮಹತ್ವದ ಘೋಷಣೆಗಳನ್ನು ಮಾಡಿದರು.

ಭೂ ಸ್ವಾಧೀನ, ಗೋ ಹತ್ಯೆ ನಿಷೇಧ ಕಾಯ್ದೆ, ಬಗರ್ ಹುಕುಂ, ಕಾರ್ಮಿಕರಿಗೆ 12 ಗಂಟೆಗಳ ಕೆಲಸ ಕಡ್ಡಾಯ ಕಾಯ್ದೆ ನಿಷೇಧ, ಗ್ರಾಮೀಣ ಬ್ಯಾಂಕುಗಳಲ್ಲಿ ರೈತರ ಸಾಲಕ್ಕೆ ಒಟಿಎಸ್ ವ್ಯವಸ್ಥೆ , ಫ್ರೀಡಂ ಪಾರ್ಕನ್ನು ಹೋರಾಟಗಳಿಗೆ ಮೀಸಲಿಡುವುದು ಸೇರಿದಂತೆ ಹಲವು ಸಮಸ್ಯೆ ಹಾಗೂ ಬೇಡಿಕೆಗಳ ಬಗ್ಗೆ ಸಂಘದ ಸದಸ್ಯರು ಮುಖ್ಯಮಂತ್ರಿಗಳ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು ಈ ಕೆಳಕಂಡ ಭರವಸೆಗಳನ್ನು ನೀಡಿದರು:

* ಬಲವಂತವಾಗಿ ರೈತರ ಸಾಲ ವಸೂಲಾತಿಯನ್ನು ಮಾಡಬಾರದೆಂದು ಸಹಕಾರಿ ಹಾಗೂ ರಾಷ್ಟ್ರೀಯ ಬ್ಯಾಂಕ್ ಗಳಿಗೆ ಸೂಚಿಸಲಾಗುವುದು.



* ಬಗರ್ ಹುಕುಂ, ಅಕ್ರಮ – ಸಕ್ರಮ, ಅರಣ್ಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಉಪ ಮುಖ್ಯಮಂತ್ರಿಗಳು ಕಂದಾಯ, ಅರಣ್ಯ, ಕೃಷಿ ಇಲಾಖೆ ಸಚಿವರು, ಅಧಿಕಾರಿಗಳೊಂದಿಗೆ ಸಭೆಯನ್ನು ಶೀಘ್ರದಲ್ಲೇ ಕರೆಯಲಾಗುವುದು.
* ಎಪಿಎಂಸಿ ಕಾಯ್ದೆ ತಿದ್ದುಪಡಿಗೆ ವಿಧಾನಪರಿಷತ್ ನಲ್ಲಿ ಅನುಮೋದನೆಯಾಗಿಲ್ಲ. ಜಂಟಿ ಸಮಿತಿಯಲ್ಲಿ ಇದಕ್ಕೆ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುವುದು.
* ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ಮಸೂದೆ, 2023 ರಡಿ 12 ಗಂಟೆ ಕೆಲಸ ಮಾಡುವ ಕಾಯ್ದೆ ಕಡ್ಡಾಯವಾಗಿ ಆಗಬೇಕೆಂದು ಇಲ್ಲ. ಈ ಬಗ್ಗೆ ಪರಿಶೀಲಿಸಿ ಅದನ್ನು ವಾಪಸ್ಸು ಪಡೆದು ಮೊದಲಿನಂತೆ 8 ಗಂಟೆಗಳಿಗೆ ಇಳಿಸಲು ಕ್ರಮ
* ಭೂ ಸುಧಾರಣಾ ಕಾಯ್ದೆ 79 ಎ ಹಾಗೂ ಬಿ ಪರಿಚ್ಛೇಧಕ್ಕೆ ತಂದಿರುವ ತಿದ್ದುಪಡಿ ಸರಿಪಡಿಸಲಾಗುವುದು.
* ಸರ್ಕಾರ ಕಾನೂನಾತ್ಮಕವಾಗಿ ಮಾಡಬಹುದಾದ ಎಲ್ಲ ಕ್ರಮವನ್ನು ಕೈಗೊಳ್ಳಲಿದೆ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್.ಪಾಟೀಲ್, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಗ್ರಾಮೀಣಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಅಂಜುಮ್ ಪರ್ವೇಜ್, ಕೃಷಿ ಇಲಾಖೆ ಕಾರ್ಯದರ್ಶಿ ಅನ್ಬು ಕುಮಾರ್, ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೋಹಸೀನ್, ಮುಖ್ಯಮಂತ್ರಿಗಳ ಕಾರ್ಯದರ್ಶಿ ತ್ರಿಲೋಕ್ ಚಂದ್ರ, ಉಪಸ್ಥಿತರಿದ್ದರು.

## ಕವಿ ಮನಸು

### ಸಮಾಧಾನಕರ

ಏನು ಹೇಳಲಿ ಎನ್ನ ಮನದ ಭಾಧೆ
ತಿರು ತಿರುಗಿ ಬಿದ್ದು ಬರುವುದು
ಕಾಲು ಬರುವ ಮೊದಲು ಬಾಲರು
ಕಾಲು ಬರಲು ಬಿದ್ದರೆನ್ನುವರು

ಕಾಲು ಬಂದು ಅರವತ್ತು ಸಂವತ್ಸರ
ಬಿದ್ದು ಬರುವವರ ಹೇಗೆ ಸಂರಕ್ಷಿಸುವರು
ಸಾಕಾಗಿ ಹೋಗಿದೆ ಆಕಸ್ಮಿಕ ಬೀಳುವುದು
ಬಿಳುವುದು ಮಾತ್ರ ಎನಗೆ ತಪ್ಪದು

ಮುದುಕರಾದಿರಿ ನೋಡಿ
ನಡೆಯಬಾರದೇನು
ಬೀಳುವವರ ನೋಡಿ ಹೇಳುವವರು ನೀವು
ಬಿದ್ದ ನೋವಿನ ಬಾಧೆ ನಿಮಗಷ್ಟೇ ಅಲ್ಲ
ನಿಮ್ಮ ಕಷ್ಟಗಳನ್ನು ನಾವು ನೋಡಬೇಕಲ್ಲ

ಮಧ್ಯ ಕುಡಿದವರು ಸೀದಾ ಮನೆಗೆ
ಬರುವರು
ಕುಡಿಯದೇ ಬರುವ ನಿಮಗೆ ಏನಾಗಿಹುದು
ಕುಡಿದವರಿಗಿಂತ ಕುಡಿಸಿದವರಿಗೆ ನಶೆ
ಹೆಚ್ಚು
ಕುಡಿಸಿದವನಿಗಿಂತ ಕುಡಿದವನ ಕಿಸೆಗಿಲ್ಲ
ಖರ್ಚು

ಎರಡು ತಿಂಗಳ ಹಿಂದೆ ಬಿದ್ದು ಬಂದಿರಿ
ಎರಡು ತಿಂಗಳು ಬಳಿಕ ಸಿದ್ದರಾದಿರಿ
ಸಿದ್ದರಾದಿರಿ ಎನ್ನುವಾಗಲೇ ಮತ್ತೆ ಬಿದ್ದಿರಿ
ಏಕೋ ನಿಮ್ಮ ಸಮಯ ಸರಿಯಿಲ್ಲಾರಿ

ಮನೆಯಲ್ಲಿ ಕೂಡುವುದಕೆ ಅತೀ ಬೇಸರ
ಹೊರಗೆ ತಿರುಗಿ ಬರಬೇಕೆಂಬ ಕಾತುರ
ಪದೇ ಪದೇ ಸಿಲುಕಿ ಸಣ್ಣ ಆವಾಂತರ
ತಪ್ಪಿದೆ ಗಂಡಾತರ ಎಂಬುದೇ
ಸಮಾಧಾನಕರ

– ಕೆ ಎಂ ಬಸವರಾಜ
ನಿವೃತ್ತ ಇಂಜನೀರ್ ಹೊಸಪೇಟೆ

### ಅಮೂಲ್ಯ ಕಾಣಿಕೆ.

ಅಮ್ಮ ನನಗಾಗಿ ಇಟ್ಟಳು ದೇವರಲ್ಲಿ ಬೇಡಿಕೆ
ಮರದಲ್ಲಿ ಕಟ್ಟಿದಳು ತೊಟ್ಟಿಲು ಕಾಣಿಕೆ
ಆದರೂ ಅವಳಲ್ಲಿ ಏನೋ ಚಡಪಡಿಕೆ
ಮತ್ತೆ ಹೆಣ್ಣು ಹುಟ್ಟಿದ್ದರೆ, ಈ ಮಗು ಬೇಕೆ?.
ಅಮ್ಮ ಯಾಕೆ ನಿನಗೆ ಈ ಅಂಜಿಕೆ?
ಗಂಡೋ, ಹೆಣ್ಣೋ ಮಗುವಿನಲ್ಲಿ
ಭೇದವೇಕೆ?
ನನಗೆ ತೋರದಿರು ಪ್ರೀತಿಯ ಮರೀಚಿಕೆ
ಏಕೆಂದರೆ, ನಾ ನಿನಗೆ ದೇವರು ಕೊಟ್ಟ
ಅಮೂಲ್ಯ ಕಾಣಿಕೆ.

– ಮಂಜುಶ್ರೀ ಮುರಳೀಧರ್.
ತೋರಣಗಲ್ಲು, ಬಳ್ಳಾರಿ.

### ತುಂಗಭದ್ರಾ ನೀರಿನ ಮಟ್ಟ



| ಗುರುವಾರ : 18-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.91 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.143 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1620.19 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9637 ಕ್ಯುಸೆಕ್ |
| ಸಾಮರ್ಥ್ಯ | 61.860 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**ಜ.19 ಮಹಾಯೋಗಿ ವೇಮನರ ಜಯಂತಿ**

# ಭಾನಂಗಳದ ಧೃವತಾರೆ ವೇಮ





**ಗುರು ಹಿರೇಮಠ,**
ಹಗರಿಬೊಮ್ಮನಹಳ್ಳಿ

ಮಹಾಯೋಗಿ ವೇಮನ 15ನೇ ಶತಮಾನದ ಶ್ರೇಷ್ಠ ವಚನಕಾರ, ಕವಿ, ತತ್ವಜ್ಞಾನಿ, ಸಮದರ್ಶಿ, ಸಮಾಜ ಚಿಂತಕರು ಹಾಗೂ ಮಾನವ ಕುಲದ ಏಳಿಗೆಗಾಗಿ ಶ್ರಮಿಸಿದವರು. ವೇಮನ ಕ್ರಿ.ಶ. 1421ರಲ್ಲಿ ಆಂಧ್ರಪ್ರದೇಶದ ಮೂಗಚಿಪಲ್ಲಿಯ ಕೋಮಗಿರಿ ವೇಮ ಭೂಪಾಲ ಮತ್ತು ಮಲ್ಲಮಾಂಬೆ ಎಂಬ ದಂಪತಿಗಳ ಮಗನಾಗಿ ಜನಿಸಿದನು.ವೇಮನ ಬದುಕಿದ್ದ ಕಾಲದ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ವೇಮನ ಕುರಿತಾದ ಸಂಶೋಧನೆಗೆ ಹೆಸರಾದ ಸಿ.ಪಿ ಬ್ರೌನ್‌ವರು ಅವರ ಕೆಲವು ಪದ್ಯಗಳನ್ನು ಆಧರಿಸಿ ವೇಮನರ ಜನ್ಮ ವರ್ಷ 1652 ಎಂದು ಅಂದಾಜಿಸಿದ್ದಾರೆ.ಕನ್ನಡದಲ್ಲಿ ಸರ್ವಜ್ಞ, ತಮಿಳಿನ ತಿರುವಳ್ಳುವರ್ ರಂತೆ ತೆಲುಗಿಗೆ ವೇಮನ ವಚನಕಾರರು, ಮಾಹಾಕವಿ ಮಹಾಯೋಗಿಯಾಗಿದ್ದಾರೆ.ವೇಮನರ ಕೃತಿಗಳು ಇತಿಹಾಸದಲ್ಲಿ "ವೇಮನ ಶತಕಲು" ಎಂದೇ ಪ್ರಸಿದ್ಧಿ ಪಡೆದಿವೆ. ವೇಮನರು ಯಾವುದೇ ಒಂದು ಪ್ರದೇಶಕ್ಕೆ ಸೀಮಿತರಾಗದೆ ಎಲ್ಲವನ್ನು ಮೀರಿದ ಭಾರತೀಯ ತತ್ವಜ್ಞಾನಿಗಳಲ್ಲಿ ಅಗ್ರಗಣ್ಯರು.'ವೇ' ಎಂದರೆ 'ವೇದ', ವೇದಾಂತ ಬಲ್ಲವನು. 'ಮ' ಎಂದರೆ ಮಹದಲ್ಲಿ ನಿಂತು ಮಾತಾಡಿದವನು ಎಂದರ್ಥ. ಆಧ್ಯಾತ್ಮ ಎಂಬ ಬಾನಂಗಳದಲ್ಲಿ ಯೋಗಿವೇಮನರು ಒಬ್ಬ ಧ್ರುವತಾರೆ.

ಮಹಾಯೋಗಿ ವೇಮನರು ಬದುಕಿನ ಎಲ್ಲ ಬಗೆಯ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ವಚನಗಳನ್ನು ರಚಿಸಿದ್ದರೂ ಅವೆಲ್ಲವುಗಳಲ್ಲಿ ಸತ್ಯದ ಬಗೆಗಿನ ಜಿಜ್ಞಾಸೆ ಎದ್ದು ಕಾಣುವಂತದ್ದು. ವೇಮನರ ವಚನಗಳಲ್ಲಿ ಒಂದು ಬೆಳಕಿದೆ, ಆ ಬೆಳಕು ಕೇವಲ ನಮ್ಮ ಭೌತಿಕ ಅಥವಾ ಪ್ರಪಂಚಿಕ ಜೀವನಕ್ಕೆ ಮಾತ್ರ ದಾರಿ ತೋರಿಸುವಂತದ್ದಲ್ಲ ಬದಲಾಗಿ ಜೀವನದ ಪರಮೋಚ್ಚ ಉದ್ದೇಶವಾದ ಸತ್ಯ ದರ್ಶನಕ್ಕೂ ಸಹ ಮಾರ್ಗ ತೋರಿಸುವಂಥದ್ದು. ಎಲ್ಲಕ್ಕಿಂತ ಮೇಲಾಗಿ ವೇಮನರು ಒಬ್ಬ ಸಮದರ್ಶಿ, ಸಕಲ ಭೂತಗಳನ್ನು ಸಮಾನ ದೃಷ್ಟಿಯಿಂದ ನೋಡಿದವರು. ಸಕಲ ಜೀವರಾಶಿಗಳ ಬಗೆಗೆ ಅಮಿತ ಪ್ರೇಮವನ್ನು ಹೊಂದಿದವರು, ಜೊತೆಗೆ ರಹಸ್ಯದರ್ಶಿ,ತತ್ವಜ್ಞಾನಿ.ಆ ಕಾರಣಕ್ಕಾಗಿಯೇ ಅವರೊಬ್ಬ ಮಹಾನ್ ಯೋಗಿ. ಮಾನವನು ತನ್ನ ವಿಕಾಸದ ಹಾದಿಯಲ್ಲಿ ಮಾನವತೆಯಿಂದ ದೈವತ್ವವನ್ನು ಕಂಡುಕೊಳ್ಳಲು ಪ್ರೇರೇಪಿಸಿದವರು ಮತ್ತು ಮಾರ್ಗ ತೋರಿಸಿದವರು ವೇಮನರು. ಅವರ ಒಂದು ವಚನ ಹೀಗಿದೆ.

**ಒಂದು ಕಲ್ಲು ಕಲ್ಲೇ**
**ಒಂದು ಮರ ಮರವೇ**
**ಒಂದು ಪ್ರಾಣಿ ಪ್ರಾಣಿಯೇ**
**ಮತ್ತು ಒಬ್ಬ ಮಾನವನು ಮಾನವನೇ;**
**ಶಿವನು ಮಾತ್ರವೇ ಶಿವನು.**
**ನಮ್ಮಲ್ಲಿರುವ ಶಿವನನ್ನು ನಾವು ಏಕೆ ಗುರುತಿಸಲಾಗುತ್ತಿಲ್ಲ?**

ಇಲ್ಲಿ ವೇಮನರು ಬೇರೆ ಬೇರೆ ದೃಷ್ಟಾಂತಗಳಿಂದ ಮಾನವನು ದೇವನಾಗುವ ಅಥವಾ ದೈವತ್ವವನ್ನು ಕಂಡುಕೊಳ್ಳುವ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಎತ್ತಿ ಹಿಡಿದಿದ್ದಾರೆ. ಹೇಗೆಂದರೆ ಒಂದು ಕಲ್ಲು ಸದಾ ಕಲ್ಲಾಗಿಯೇ ಇರುತ್ತದೆ. ಅದು ಚಲನಶೀಲತೆಗೆ ಅಥವಾ ಬದಲಾವಣೆಗೆ ಒಳಪಡುವಂಥದ್ದಲ್ಲ. ಅದೇ ರೀತಿ ಒಂದು ಮರ ಮರವಾಗಿಯೇ ಇದ್ದು, ಕೊನೆಗೆ ಮರವಾಗಿಯೇ ತನ್ನ ಅಂತ್ಯ ಕಾಣುತ್ತದೆ. ಅವೆಲ್ಲವುಗಳಲ್ಲಿ ಚೇತನವಿದ್ದರೂ, ಅದನ್ನು ಗುರುತಿಸುವ ಸಾಧ್ಯತೆ ಅವುಗಳಿಗೆ ಇರುವುದಿಲ್ಲ. ಆದರೆ ಮಾನವನು ಇವೆಲ್ಲವುಗಳಿಗಿಂತ ಭಿನ್ನವಾಗಿ ನಿಲ್ಲುತ್ತಾನೆ. ಏಕೆಂದರೆ ಅವನು ತನ್ನಲ್ಲಿರುವ ಚೇತನವನ್ನು ಗುರುತಿಸಿ ತಾನೇ ಅದಾಗುವ ಸಾಮರ್ಥ್ಯವುಳ್ಳವನು. ಇಂತಹ ಅಗಾಧ ಯೋಗ್ಯತೆಯುಳ್ಳವನು ಅದರಿಂದ ವಿಮುಖನಾಗುವುದಕ್ಕೆ ವೇಮನರು ಕಳವಳ ವ್ಯಕ್ತಪಡಿಸುತ್ತಾರೆ. ಇದಕ್ಕೆ ಪುಷ್ಟಿ ನೀಡುವಂತೆ ನಮ್ಮಲ್ಲಿರುವ ಸತ್ಯವನ್ನು ಕಾಣುವುದೇ ಭಾರತೀಯ ತಾತ್ವಿಕ ಮೌಲ್ಯಗಳಲ್ಲಿ ಅತ್ಯಂತ ಪ್ರಮುಖವಾದುದನ್ನು ನಾವು ಬಹಳಷ್ಟು ಅಧ್ಯಯನಗಳಿಂದ ಕಂಡುಕೊಳ್ಳಬಹುದಾಗಿದೆ. ವೇಮನರ ಮತ್ತೊಂದು ಕವಿತೆಯನ್ನು ಇಲ್ಲಿ ನೋಡುವುದಾದರೆ

**ಖಳರು ಬೈವರೆಂದು ಕಳವಳಿಸುವುದೇಕೆ**
**ಅವರ ನಿಂದೆಯಿಂದ ಖ್ಯಾತಿ ಕೆಡದು ।**
**ಸಜ್ಜನರ ಕಿಡಿನುಡಿ ಶಾಪವಾಗುವುದಂಟು**
**ವಿಶ್ವದಾಭಿರಾಮ ಕೇಳು ವೇಮ ॥**

ಈ ಜಗತ್ತಿನಲ್ಲಿ ಖಳರು ಅಂದರೆ ದುರುಳರು ಸಜ್ಜನರನ್ನು ಅಥವಾ ಯೋಗ್ಯರನ್ನು ಸದಾ ನಿಂದಿಸುತ್ತಲೇ ಇರುತ್ತಾರೆ. ಇಂತಹ ದುರುಳರ ನಿಂದನೆ ಅಥವಾ ಟೀಕೆಗಳಿಂದ ಸಜ್ಜನರ ಖ್ಯಾತಿ ಎಂದೆಂದೂ ಕೆಡುವುದಿಲ್ಲ. ಸತ್ಯವನ್ನು ಮರೆಮಾಚಲು ಅಥವಾ ಹತ್ತಿಕಲು ಯಾರಿಂದಲೂ ಸಾಧ್ಯವಿಲ್ಲ. ಪಾತಕಿಗಳ ನಿಂದನೆಯ ಮಾತುಗಳಿಂದ ಸಜ್ಜನರಿಗೆ ತಾತ್ಕಾಲಿಕವಾಗಿ ನೋವಾದರೂ ಅವರ ವೇದನೆಯಿಂದ ಬರುವಂತಹ ಮಾತುಗಳು ಆ ದುರುಳರಿಗೆ ಶಾಪವಾಗಿ ಪರಿಣಮಿಸುತ್ತದೆ. ಏಕೆಂದರೆ ಸಜ್ಜನರ ಮನಸ್ಸು ಅತ್ಯಂತ ಪವಿತ್ರವಾಗಿರುತ್ತದೆ, ಅಂತಹ ಶುದ್ಧ ಮನಸ್ಸೇ ಅತ್ಯಂತ ಶಕ್ತಿಶಾಲಿಯಾಗಿರುತ್ತದೆ. ಹೀಗಾಗಿ ಯೇ ಸಜ್ಜನರ ಶಾಪದಿಂದ ದುರುಳರು ನಾಶವಾಗುವರು.

ಹಾಗೇ, ವೇಮನರ ಬಹುಪಾಲು ಪದ್ಯಗಳು 'ವಿಶ್ವದಾಭಿರಾಮ ಕೇಳು ವೇಮ' ಎಂದು ಕೊನೆಯಾಗುತ್ತವೆ. ತನ್ನ ಗುರು ಅಭಿರಾಮಾಚಾರ್ಯರ ಗೌರವಾರ್ಥ ವೇಮನ ಇದನ್ನು ಬಳಸಿದ್ದಾರೆ.ವಿಶ್ವಬೋಧೆ ಮಾಡಿಸಿದ ಗುರು ಅಭಿರಾಮ ಆಚಾರ್ಯರು ನಿನಗೆ (ವೇಮನನಿಗೆ) ಹೇಳುತ್ತಿದ್ದಾರೆ, ಕೇಳು ಎಂದು ಇದರ ಅರ್ಥ.

1820 ರ ಅವಧಿಯಲ್ಲಿ. ತೆಲುಗು ಮಾತನಾಡುವ ಪ್ರದೇಶದಿಂದ (ಪ್ರಸ್ತುತ ಆಂಧ್ರಪ್ರದೇಶ ಮತ್ತು ತೆಲಂಗಾಣ) ಬ್ರಿಟಿಷ್ ಸರ್ಕಾರಕ್ಕೆ ಕರ್ತವ್ಯಗಳನ್ನು ಪೂರೈಸಲು ಸಿ.ಪಿ ಬ್ರೌನ್ ಎಂಬ ಅಧಿಕಾರಿಯನ್ನು ನೇಮಿಸಲಾಯಿತು. ಸರ್ಕಾರದ ಆದೇಶದಂತೆ, ಅವರು ಸ್ಥಳಕ್ಕೆ ಹೋದರು. ನಂತರ ಜನರನ್ನು ಮತ್ತು ಸ್ಥಳವನ್ನು ಸುಲಭವಾಗಿ ತಿಳಿದುಕೊಳ್ಳಲು ಹತ್ತು ವರ್ಷಗಳ ಕಾಲ ತೆಲುಗು ಕಲಿತರು.ಒಂದು ದಿನ, ಬೀದಿಯೊಂದರಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಒಬ್ಬ ಭಿಕ್ಷುಕನು ವೇಮನ ಶತಕಂ (ವೇಮನರ ನೂರು ಕವಿತೆಗಳ ಸಂಗ್ರಹ) ದಿಂದ ತೆಲುಗು ಕವಿತೆ / ಪದ್ಯಂ 'ಪದ್ಯಂ' ಅನ್ನು ಹಾಡುತ್ತಾನೆ. ಕವಿತೆಯನ್ನು ಆಲಿಸಿ ಅದನ್ನು ಅರ್ಥಮಾಡಿಕೊಂಡ ನಂತರ, ಶ್ರೀ ಬ್ರೌನ್ ಅವರು ಕವಿತೆಯಲ್ಲಿನ ತತ್ವಶಾಸ್ತ್ರದತ್ತ ಸೆಳೆಯಲ್ಪಟ್ಟರು. ಹೀಗೆ ಜನರಿಂದ ಜನರಿಗೆ ಕೇವಲ ಮೌಖಿಕವಾಗಿ ಹರಿದಾಡಲ್ಪಡುತ್ತಿದ್ದ ವೇಮನರ ಕವಿತೆಗಳನ್ನು ಬರವಣಿಗೆಯಲ್ಲಿ ಸಂಗ್ರಹಿಸಿ ಉಳಿಸಿದ ಬಹುದೊಡ್ಡ ಕೀರ್ತಿ ಸಿ.ಪಿ ಬ್ರೌನ್ ರವರಿಗೆ ಸಲ್ಲುತ್ತದೆ.

ಉತ್ತರದಿಂದ ದಕ್ಷಿಣದವರೆಗೆ ಇಡೀ ಭಾರತವು ಭಕ್ತಿ ಮತ್ತು ಸೂಫಿ ಚಳುವಳಿಗಳಿಂದ ಆವೃತವಾದಾಗ, ವೇಮನರು ಎಲ್ಲ ಮಾನವರನ್ನು ಗೌರವಿಸಲು ಮತ್ತು ಸಮಾಜದಲ್ಲಿ ಸಮಾನತೆಯನ್ನು ತರಲು ತಮ್ಮ ಬೋಧನೆಯ ಮೂಲಕ ಪ್ರಯತ್ನಿಸಿದರು. ಅವರ ಎಲ್ಲ ಬೋಧನೆಗಳು ಮಾನವತಾವಾದದ ಮೇಲೆ ನೆಲೆಗೊಂಡಿವೆ. ಅವರು ಒಬ್ಬ ಅಪ್ರತಿಮ ಜೀವ ಕಾರುಣ್ಯದ ಸಂತ.

## ಶುಲ್ಕ ಮರುಪಾವತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ) ವಿದ್ಯಾರ್ಥಿಗಳಿಗೆ 2023-24ನೇ ಸಾಲಿನ ರಾಜ್ಯ ವಿದ್ಯಾರ್ಥಿ ವೇತನ ಯೋಜನೆಯಡಿ ಮೆಟ್ರಿಕ್ ನಂತರದ ಪಿ.ಯು.ಸಿ, ಡಿಪ್ಲೋಮಾ, ತಾಂತ್ರಿಕ ಮತ್ತು ವೃತ್ತಿಪರ, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗೆ ಎಸ್‌ಎಸ್‌ಪಿ ಪೋರ್ಟಲ್ ಮೂಲಕ ಆನ್‌ಲೈನ್ ಅರ್ಜಿ ಅಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಶುಲ್ಕ ಮರುಪಾವತಿಗೆ ಎಸ್‌ಎಸ್‌ಪಿ ಪೋರ್ಟಲ್ : https://ssp.karnataka.gov.in ಪೋರ್ಟಲ್ ಮೂಲಕ ಜನವರಿ 30 ರೊಳಗೆ ಅರ್ಜಿ ಸಲ್ಲಿಸಬೇಕು. ನಂತರ ಆನ್‌ಲೈನ್ ಅರ್ಜಿ ಪ್ರತಿ ಹಾಗೂ ಅಗತ್ಯ ದಾಖಲೆಗಳೊಂದಿಗೆ ಹಾರ್ಡ್ ಪ್ರತಿಗಳನ್ನು ಸಂಬಂಧಪಟ್ಟ ಕಾಲೇಜು ಪ್ರಾಂಶುಪಾಲರುಗಳಿಗೆ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಅಲ್ಪಸಂಖ್ಯಾತರ ಸಮುದಾಯ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ) ದವರಾಗಿರಬೇಕು. ಕರ್ನಾಟಕ ರಾಜ್ಯಕ್ಕೆ ಸೇರಿದವರಾಗಿರಬೇಕು. ವಿದ್ಯಾರ್ಥಿಯ ಹಿಂದಿನ ವರ್ಷದ ಫಲಿತಾಂಶ ಕನಿಷ್ಠ ಶೇ.50 ರಷ್ಟಿರಬೇಕು. ವಿದ್ಯಾರ್ಥಿ ಕುಟುಂಬದ ಒಟ್ಟು ವಾರ್ಷಿಕ ಆದಾಯ ಮೆಟ್ರಿಕ್ ನಂತರ ವಿದ್ಯಾರ್ಥಿಗಳಿಗೆ (ಶುಲ್ಕ ಮರುಪಾವತಿ) ರೂ.2 ಲಕ್ಷ ಮತ್ತು ಮೆಟ್ರಿಕ್-ಕಮ್-ಮೀನ್ಸ್ ವಿದ್ಯಾರ್ಥಿಗಳ ಆದಾಯ ರೂ. 2.50 ಲಕ್ಷ ಮೀರಿರಬಾರದು. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಮತ್ತು ಕೊಪ್ಪಳ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ ಹಾಗೂ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಕೊಪ್ಪಳ: 08539-225070, ಗಂಗಾವತಿ: 08533-230027, ಕುಷ್ಟಗಿ: 8880482486, ಯಲಬುರ್ಗಾ: 9620522537 ಇವರನ್ನು ಸಂಪರ್ಕಿಸಬಹುದು ಎಂದು ಇಲಾಖೆಯ ಜಿಲ್ಲಾ ಅಧಿಕಾರಿ ಸುರೇಶ ಕೋಕರೆ ತಿಳಿಸಿದ್ದಾರೆ.

## ಉಸ್ಮಾನಿಯಾ ಮಾರುಕಟ್ಟೆಯಲ್ಲಿ ತರಕಾರಿ ಮಾರಾಟಕ್ಕೆ ಸೂಚನೆ

**ರಾಯಚೂರು:** ನಗರಸಭೆ ವ್ಯಾಪ್ತಿಯಲ್ಲಿ ಬರುವ ಉಸ್ಮಾನಿಯ ತರಕಾರಿಯ ಮಾರುಕಟ್ಟೆ ಹಿಂದುಗಡೆ ರೈತ ಮಾರುಕಟ್ಟೆ, ತರಕಾರಿ ಮಾರಾಟ ಮಾಡಲು ರೈತರಿಗಾಗಿ ಲಭ್ಯವಿದ್ದು, ಅಲ್ಲಿಯೇ ತರಕಾರಿ ಮಾರಾಟ ಮಾಡಬೇಕು. ಬಹಳಷ್ಟು ರೈತರು ರೈತ ಮಾರುಕಟ್ಟೆಯಲ್ಲಿ ತರಕಾರಿ ಮಾರಾಟ ಮಾಡದೇ ಬೇರೆ ಬೇರೆ ಕಡೆ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ದೂರುಗಳು ಬರುತ್ತಿದ್ದು, ನಿಯಮಾನುಸಾರ ಕ್ರಮ ಜರುಗಿಸಬೇಕಾಗಿರುತ್ತದೆ. ಸೂಚಿಸಿದೆ.

## ಶಿಕ್ಷಣದಿಂದ ಕಲೆಗೆ ಹೊಸರೂಪ : ಹೇಮಲತಾ

### ಕೊಪ್ಪಳದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜನಪರ ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಕೊಪ್ಪಳ**

ಉತ್ಸವ, ಹಬ್ಬಗಳು ಕನ್ನಡ ಜನಪರ ಸಂಸ್ಕೃತಿಯ ಮೂಲ ಹಿನ್ನೆಲೆಯಾಗಿವೆ ಎಂದು ವಿಧಾನ ಪರಿಷತ್ ಸದ್ಯಸರಾದ ಹೇಮಲತಾ ನಾಯಕ ಅವರು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2023-24ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಜನವರಿ 17ರಂದು ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದ್ದ ಜನಪರ ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತವು ಒಂದು ಬಹು ಸಂಸ್ಕೃತಿಯ ದೇಶವಾಗಿದೆ. ಅದೇ ರೀತಿ ನಮ್ಮ ಕರ್ನಾಟಕ ರಾಜ್ಯವು ಸಹ ಸಂಸ್ಕೃತಿಯ ನಾಡಾಗಿದ್ದು, ಕಲೆ, ಸಂಸ್ಕೃತಿ, ವಾಸ್ತುಶಿಲ್ಪಕ್ಕೆ ಕನ್ನಡ ನಾಡು ಅಪಾರ ಕೊಡುಗೆಗಳನ್ನು ನೀಡಿದೆ. ವಿವಿಧ ನಾಡಹಬ್ಬಗಳು ಸಾಂಪ್ರದಾಯಿಕ ಹಬ್ಬಗಳು ಹಾಗೂ ಅವುಗಳ ಆಚರಣೆ, ಕನ್ನಡಪರ ಕಾರ್ಯಕ್ರಮಗಳು, ಸಮ್ಮೇಳನಗಳು ನಮ್ಮ ಸಂಸ್ಕೃತಿಯ ಮೂಲ ಹಿನ್ನೆಲೆಯನ್ನು ತಿಳಿಸುತ್ತವೆ. ಜನರಲ್ಲಿ ಮತ್ತು ವಿಶೇಷವಾಗಿ ಮಕ್ಕಳಲ್ಲಿ ನಮ್ಮ ಸಂಸ್ಕೃತಿ, ಕಲೆ, ಜನಪದ, ಸಾಂಪ್ರದಾಯಿಕ ಪದ್ಧತಿಗಳ ಬಗ್ಗೆ ಅರಿವು ಮೂಡಿಸಲು ಜನಪರ ಉತ್ಸವದಂತಹ ಕಾರ್ಯಕ್ರಮಗಳು ಬಹುಮುಖ್ಯವಾಗಿವೆ ಎಂದರು.

ಕಲಾವಿದರು ಕಲೆಯನ್ನೇ ತಮ್ಮ ಬದುಕನ್ನಾಗಿಸಿಕೊಂಡಿರುತ್ತಾರೆ. ಶಿಕ್ಷಣದಿಂದ ಕಲೆಗೆ ಹೊಸ ರೂಪ ನೀಡಬಹುದು. ಇದಕ್ಕಾಗಿ ಇಂದಿನ ತಂತ್ರಜ್ಞಾನ ಯುಗದಲ್ಲಿ ಹಲವಾರು ಅವಕಾಶಗಳು ಸಿಗಲಿವೆ. ಕಲಾವಿದರು ತಮ್ಮ ಪೂರ್ವಜರ ಕಲೆಯನ್ನು ಮುಂದುವರೆಸುವುದರ ಜೊತೆಗೆ ಶಿಕ್ಷಣಕ್ಕೂ ಹೆಚ್ಚು ಒತ್ತು ನೀಡಬೇಕು ಎಂದು ಹೇಳಿದರು.





ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಾರೆಪ್ಪ ದಾಸರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ: ರಾಮ, ಲಕ್ಷ್ಮಣ ಮತ್ತು ಹನುಮನ ವೇಷದಲ್ಲಿ ಪಾಲ್ಗೊಂಡ ಹಗಲುವೇಷ ಕಲಾವಿದರು ಕಾರ್ಯಕ್ರಮದಲ್ಲಿ ಗಮನ ಸೆಳೆದರು. ಕಲಾವಿದರಾದ ಹನುಮಂತಪ್ಪ ಭಜಂತ್ರಿ ಅವರು ಷಹನಾಯಿ ವಾದನ, ಕು. ಶಕುಂತಲಾ ಬೆನ್ನಾಳ ಅವರು ಶಾಸ್ತ್ರೀಯ ಸಂಗೀತ, ವೀರೇಶ ಭಜಂತ್ರಿ ಹಾಗೂ ಹನುಮಂತಪ್ಪ ಭಜಂತ್ರಿ, ಕು.ರಂಜನಿ ಆರತಿ, ಸುಖಮುನಿಯಪ್ಪ ಗಡಗಿ ಅವರು ಸುಗಮ ಸಂಗೀತ, ಮುದುಕವ್ವ ಗಂಜಿಹಾಳ ಅವರು ಗೀಗೀ ಪದಗಳು, ಮಾರೆಪ್ಪ ಚನ್ನದಾಸರ ಅವರ ತತ್ವಪದಗಳು, ಸುಧಾ ಮುತ್ತಾಳ ಹಾಗೂ ತಂಡದವರು ಸುಗ್ಗಿ ಕುಣಿತ, ಕುಮಾರೇಶ್ ದೊಡ್ಮನಿ ಅವರು ತಬಲಾ ಸೋಲೊ, ಮರಿಯಪ್ಪ ಚಾಮಲಾಪುರ ಅವರು ಜಾನಪದ ಸಂಗೀತ, ಯಂಕಪ್ಪ ಶಿಳ್ಳಿಕ್ಯಾತರ ಅವರು ತೊಗಲುಗೊಂಬೆ, ಹುಲಿಗೆಮ್ಮ ಹಂದ್ರಾಳ ಅವರು ಸಂಪ್ರದಾಯದ ಪದಗಳು, ರಾಮಪ್ಪ ಹರಿಜನ ಅವರು ಬಯಲಾಟ, ಪರಸಪ್ಪ ಹಾಗೂ ತಂಡದವರು ಲಂಬಾಣಿ ನೃತ್ಯ, ಗುಂಡಪ್ಪ ವಿಭೂತಿ ಅವರು ಹಗಲುವೇಷ, ಬಸಪ್ಪ ಗುಡಗಲದಿನ್ನಿ ಅವರು ಕಣಿ ಹಲಗಿ ವಾದನ, ರಘು ಹಾಗೂ ತಂಡದವರು ನಗಾರಿ, ಚೇತನ ಹಾಗೂ ತಂಡದವರು ನಾಸಿಕ್ ಡೊಲ್, ಮಲ್ಲಾಸಿಂಗ್ ಹಾಗೂ ತಂಡದವರು ಗಾರುಡಿ ಗೊಂಬೆ ಮತ್ತು ರೋಹಿತ್ ಹಾಗೂ ತಂಡದವರು ಕೀಲುಕುದುರೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪಸ್ತುತ ಪಡಿಸಿದರು.

**ಮೆರವಣಿಗೆ:** ಸಾಹಿತ್ಯ ಭವನದ ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ತಾಲ್ಲೂಕು ಕ್ರೀಡಾಂಗಣದಿಂದ ಸಾಹಿತ್ಯ ಭವನದವರೆಗೆ ಮೆರವಣಿಗೆ ನಡೆಯಿತು. ತಹಶೀಲ್ದಾರ ವಿಠ್ಠಲ್ ಚೌಗಲಾ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳು ಪಾಲ್ಗೊಂಡಿದ್ದವು.

ಮೈಕ್ರೋ ನ್ಯೂಸ್

## ಗೃಹರಕ್ಷಕದಳದ ಗೌರವ ಸಮಾದೇಷ್ಟರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲೆಯ ಗೃಹ ರಕ್ಷಕದಳದ "ಗೌರವ ಸಮಾದೇಷ್ಟರ" ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಗೃಹರಕ್ಷಕದಳದ "ಗೌರವ ಸಮಾದೇಷ್ಟರ" ಖಾಲಿ ಇದ್ದು, ಅಭ್ಯರ್ಥಿಯನ್ನು ಅರ್ಹತೆ ಆಧಾರದ ಮೇಲೆ ಹಾಗೂ ಸರ್ಕಾರದ ನಿಯಮನುಸಾರವಾಗಿ ಆಯ್ಕೆ ಮಾಡಲಾಗುತ್ತದೆ.

**ಅರ್ಹತೆಗಳು:** ವಯೋಮಿತಿ 50 ವರ್ಷ ಒಳಗಿರಬೇಕು, ಪದವಿ ಪೂರ್ಣಗೊಳಿಸಿರಬೇಕು, ಯಾವುದೇ ರಾಜಕೀಯ ಪಕ್ಷಗಳ ಚಟುವಟಿಕೆಗಳಲ್ಲಿ ಪಾಲ್ಗೊಂಡಿರಬಾರದು, ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ಪ್ರಕರಣಗಳಲ್ಲಿ ಭಾಗಿಯಾಗಿರಬಾರದು, ಜಿಲ್ಲಾ ಮುಖ್ಯ ಕಚೇರಿಯ 20 ಕಿ.ಮೀ. ವ್ಯಾಪ್ತಿಯೊಳಗೆ ವಾಸವಿರಬೇಕು.

ಜಿಲ್ಲಾ ಆರೋಗ್ಯಾಧಿಕಾರಿಗಳಿಂದ ದೈಹಿಕ ಮತ್ತು ಮಾನಸಿಕ ಸಧೃಡತೆ ಪ್ರಮಾಣ ಪತ್ರ ಪಡೆದಿರಬೇಕು. ಮತ್ತು ರೆಸಿಪಿಯೆಂಟ್ ಆಫ್ ಗ್ಯಾಲಂಟ್ರಿ ಪ್ರಶಸ್ತಿ, ಎನ್.ಸಿ.ಸಿ "ಸಿ" ಪ್ರಮಾಣ ಪತ್ರ, ಭಾರತೀಯ ಸೇನೆ, ಪ್ಯಾರ ಮಿಲ್ಟ್ರಿ ಸೇನೆ ಅಥವಾ ಪೋಲಿಸ್ ಇಲಾಖೆಗಳಲ್ಲಿ ಐದು ವರ್ಷ ಸೇವೆ ಸಲ್ಲಿಸಿದವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಸ್ವವಿವರದೊಂದಿಗೆ ಜ.30 ರ ಒಳಗಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಿದ್ದಾರೆ.

## ಆದರ್ಶ ವಿದ್ಯಾಲಯ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**
ತಾಲ್ಲೂಕಿನ ಟಣಕನಕಲ್‌ನ ಆದರ್ಶ ವಿದ್ಯಾಲಯ (ಆರ್.ಎಂ.ಎಸ್.ಎ) ಶಾಲೆಯಲ್ಲಿ 2024-25 ನೇ ಸಾಲಿಗೆ 6ನೇ ತರಗತಿ ಪ್ರವೇಶ ಪರೀಕ್ಷೆಯ ಮೂಲಕ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸ್ತುತ 5ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪಾಲಕರು ಹಾಗೂ ತಾಲ್ಲೂಕಿನ ಎಲ್ಲ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರು ಇಲಾಖೆಯ ವೆಬ್‌ಸೈಟ್: www.schooleducation.kar.nic.in ಮತ್ತು vidyavahini.karnataka.gov.in ಮೂಲಕ ಫೆಬ್ರವರಿ 06 ರೊಳಗೆ ಆನ್‌ಲೈನ್ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ಪ್ರಸ್ತುತ 5ನೇ ತರಗತಿ ಓದುತ್ತಿರುವ ವಿದ್ಯಾರ್ಥಿಯ ಸ್ಯಾಟ್ಸ್ ನಂಬರ್, ಇತ್ತೀಚಿನ ಭಾವ ಚಿತ್ರ, ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿ, ಪೋಷಕರ ಚಾಲ್ತಿಯಲ್ಲಿರುವ ಮೊಬೈಲ್ ಸಂಖ್ಯೆಗಳನ್ನು ಒದಗಿಸಬೇಕು. (ಪಾಲಕರು ಕೊಪ್ಪಳ ತಾಲ್ಲೂಕಿನಲ್ಲಿ ವಾಸವಿರಬೇಕು.) ಅಂಗವಿಕಲ ವಿದ್ಯಾರ್ಥಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ನೀಡಿರುವ ಪ್ರಮಾಣ ಪತ್ರ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮುಖ್ಯೋಪಾಧ್ಯಾಯರು, ಆದರ್ಶ ವಿದ್ಯಾಲಯ, ಟಣಕನಕಲ್, ಮೊ.ಸಂ: 9901130717, 9916703201 ಸಂಪರ್ಕಿಸಬಹುದು.




# ನಿರಂತರ 30 ಗಂಟೆಗಳ ಕಾಲ ಹನುಮಾನ ಚಾಲೀಸಾ ಪಾರಾಯಣ

### ಶ್ರೀ ಕ್ಷೇತ್ರ ಹೆಬ್ಬಳ್ಳಿಯ ಚೈತನ್ಯಾಶ್ರಮ ನಾಮಸಾಧಕ ಸಮಿತಿ ಪ್ರಮುಖ ಶ್ರೀಪಾದ ಪೂಜಾರ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**
ಶ್ರೀ ಕ್ಷೇತ್ರ ಹೆಬ್ಬಳ್ಳಿಯ ಚೈತನ್ಯಾಶ್ರಮ ನಾಮಸಾಧಕ ಸಮಿತಿಯಿಂದ ನಗರದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಜ.19 ರಿಂದ 22ರ ವರೆಗೆ ಅಖಂಡ ಶ್ರೀಹನುಮಾನ ಚಾಲೀಸಾ ಪಠಣ, ಗುರುವಂದನೆ, ಗುರು ಪಾದುಕಾ ಅಭಿಷೇಕ ಹಾಗೂ ಸತತ 30 ಗಂಟೆಗಳ ಕಾಲ ಹನುಮಾನ ಚಾಲೀಸಾ ಪಾರಾಯಣ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಪ್ರಮುಖ ಶ್ರೀಪಾದ ಪೂಜಾರ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.19 ರಂದು ಸಂಜೆ 5.30 ಗಂಟೆಗೆ ಹೆಬ್ಬಳ್ಳಿಯ ಚೈತನ್ಯಾಶ್ರಮದಿಂದ ಆಗಮಿಸಿದ ಶ್ರೀ ಬ್ರಹ್ಮಚೈತನ್ಯ ಮಹಾರಾಹರ ಪಾದುಕೆಗಳೊಂದಿಗೆ ಶ್ರೀ ದತ್ತಾವಧೂತ ಗುರುಗಳು ಹಾಗೂ ಆಶ್ರಮವಾಸಿಗಳ ಶೋಭಾ ಯಾತ್ರೆ ನಡೆಯಲಿದೆ. ಕಾಲೇಜು ಮೈದಾನದಿಂದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪಕ್ಕೆ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿರುವ ಭಜನಾ ಮಂಡಳಿಗಳೊಂದಿಗೆ ಭವ್ಯ ಮೆರವಣಿಗೆಯಲ್ಲಿ ಕರೆ ತರಲಾಗುವುದು ಎಂದು ತಿಳಿಸಿದರು.

ಜ.20 ರಂದು ಬೆಳಗ್ಗೆ 5 ಗಂಟೆಯಿಂದ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಲಿದ್ದು, ಕಾಕಡಾರತಿ, ಪಂಚಪದಿ ಭಜನೆಯ ನಂತರ ಅಖಂಡ ಶ್ರೀಹನುಮಾನ ಚಾಲೀಸಾ ನಿರಂತರ 30 ಗಂಟೆಗಳ ಪಠಣ ಪ್ರಾರಂಭವಾಗಲಿದ್ದು, ಜ.21 ರಂದು ಮಧ್ಯಾಹ್ನ 12 ಗಂಟೆಗೆ ಸಹಸ್ರ ಕಂಠ ಹನುಮಾನ ಚಾಲೀಸಾಪಠಣದೊಂದಿಗೆಸಂಪನ್ನಗೊಳ್ಳಲಿದೆ. ಈ ನಡುವೆ ಪ್ರತಿ ಗಂಟೆಗೊಮ್ಮೆ 11 ಜನರ ಭಜನಾ ತಂಡ ಬದಲಾಗಲಿದ್ದು, ನೂರಾರು ಭಜನಾ ತಂಡಗಳು ನೋಂದಾಯಿಸಿಕೊಂಡಿವೆ. ಸದ್ಯ 71 ವಸಂತಗಳನ್ನು ಪೂರೈಸಿರುವ ಶ್ರೀದತ್ತಾವಧೂತ ಗುರುಗಳೂ ನೂರು ವರ್ಷಗಳ ಕಾಲ ಬಾಳುವಂತೆ ಪ್ರಾರ್ಥಿಸಿ, ಮಧ್ಯಾಹ್ನ 12 ಗಂಟೆಗೆ ಗುರುವಂದನಾ ನೆರವೇರಿಸಲಾಗುತ್ತದೆ.

ಜ.22 ರಂದು ಬೆಳಗ್ಗೆ 6.30ಕ್ಕೆ ಕಾಕಡಾರತಿ, ಪಂಚಪದಿ ಭಜನೆ ನಂತರ ರಾಮನಾಮ ಜಪ ಸಂಕಲ್ಪದ ಪ್ರಯುಕ್ತ 'ರಾಮತಾರಕ ಸಂಗತಾ ಯಜ್ಞ' ಮತ್ತಿತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜೊತೆಗೆ ಅಯೋಧ್ಯೆಯಲ್ಲಿ ಶ್ರೀರಾಮ ಮೂರ್ತಿ ಪ್ರತಿಷ್ಠಾಪನೆ ನಡೆಯತ್ತಿದ್ದರೆ, ಇತ್ತ ಹನುಮನ ಜನ್ಮಸ್ಥಳದಲ್ಲಿ ಹನುಮಾನ ಪಾರಾಯಣ ನಡೆಯುತ್ತಿರುವುದು ವಿಶೇಷ ಎಂದು ತಿಳಿಸಿದರು.

ಮೂರು ದಿನಗಳ ಅಖಂಡ ಹನುಮಾನ ಚಾಲೀಸಾ ಪಾಠ ಸಂಕಲ್ಪನಾ ಹಾಗೂ ಮಾರ್ಗದರ್ಶನ ಕಾರ್ಯಕ್ರಮಕ್ಕೆ ಹೊಸಪೇಟೆಯ ಚಿಂತಾಮಣಿ ಮಠದ ಶಿವಾನಂದ ಭಾರತಿ ಸ್ವಾಮೀಜಿ, ದತ್ತಾವಧೂತ ಗುರುಗಳು ಹಾಗೂ ಗದುಗಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ನಿರ್ಭಯಾನಂದ ಸರಸ್ವತೀ ಸ್ವಾಮೀಜಿ ವೇದಿಕೆಯಲ್ಲಿದ್ದು, ಆಶೀರ್ವಚನ ನೀಡುವರು. ನಾಡಿನ ವಿವಿಧ ಮಠಾಧೀಶರು, ಸಾಧು, ಸಂತರು ಪಾಲ್ಗೊಳ್ಳುವರು ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಪ್ರಮುಖರಾದ ಮಯೂರನಾಥ ಜೋಶಿ, ವೆಂಕೋಬರಾವ್ ಕುಲ್ಕರ್ಣಿ, ಬಿ.ಎಂ.ಸೋಮಶೇಖರ್, ಅರವಿಂದರಾವ್ ಕುಲ್ಕರ್ಣಿ, ವಸಂತ ಕುಮಾರ್, ಗುರುರಾಜ ದೇಸಾಯಿ, ರವಿಶಂಕರ್ ಉಪಸ್ಥಿತರಿದ್ದರು.

# ಜ.26 ರಿಂದ ಜಿಲ್ಲೆಯಾದ್ಯಂತ ಸಂವಿಧಾನ ಜಾಗೃತಿ ಜಾಥಾ



**ಹಂಪಿ ಟೈಮ್ಸ್ ಬಳ್ಳಾರಿ**
ಭಾರತ ಸಂವಿಧಾನ ಆಶಯ ಮತ್ತು ಅದರ ಮೌಲ್ಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜನವರಿ 26 ರಿಂದ ಜಿಲ್ಲೆಯಾದ್ಯಂತ ಸಂವಿಧಾನ "ಜಾಗೃತಿ ಜಾಥಾ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿ ಮಾತನಾಡಿದ ಅವರು, ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲಾ ಗ್ರಾಮಪಂಚಾಯತಿಗಳಲ್ಲಿ ಸ್ಥಬ್ಧಚಿತ್ರ ವಾಹನದ ಮೂಲಕ ಮೆರವಣಿಗೆ ನಡೆಸಿ ಜನರಿಗೆ ಸಂವಿಧಾನ ಪರಿಕಲ್ಪನೆಗಳ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಸತೀಶ್ ಅವರು ಮಾತನಾಡಿ, ಸಂವಿಧಾನ ಜಾಥಾ ಕಾರ್ಯಕ್ರಮದ ಸ್ಥಬ್ದಚಿತ್ರ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವರು ಜನವರಿ 26ರಂದು ಚಾಲನೆ ನೀಡಲಿದ್ದಾರೆ. ಮೆರವಣಿಗೆಯು ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಸಂಚರಿಸಲಿದೆ. ಪ್ರತಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಸ್ಥಬ್ದಚಿತ್ರ ವಾಹನ ಆಗಮಿಸಿದಾಗ ಜನಪ್ರತಿನಿಧಿಗಳು ಮೆರವಣಿಗೆಯನ್ನು ಸ್ವಾಗತಿಸುವರು. ಸ್ಥಳೀಯ ಸಂಸ್ಥೆಗಳು ಎಲ್ಲಾ ರೀತಿಯ ಬೆಂಬಲ ನೀಡಬೇಕು. ಸಂಜೆ ವೇಳೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ವಿವರಿಸಿದರು.

ಮೆರವಣಿಗೆಯ ಉದ್ದಕ್ಕೂ ಭಾರತ ಸಂವಿಧಾನದ ಬಗ್ಗೆ ಕಿರು ಮಾಹಿತಿ ಪುಸ್ತಕವನ್ನು ಮುದ್ರಿಸಿ ಪ್ರತಿಗಳನ್ನು ಜನಸಾಮಾನ್ಯರಿಗೆ ವಿತರಿಸುವ ವ್ಯವಸ್ಥೆ ಮಾಡಬೇಕೆಂದು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಭೆಯಲ್ಲಿ ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಸಹಾಯಕ ಆಯುಕ್ತರಾದ ಹೇಮಂತ್.ಎನ್, ಎಎಸ್ಪಿ ಕೆ.ಪಿ.ರವಿಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಇತರರು ಉಪಸ್ಥಿತರಿದ್ದರು.

# 75ನೇ ಗಣರಾಜ್ಯೋತ್ಸವ ಅಚ್ಚುಕಟ್ಟಾಗಿ ಆಚರಣೆಗೆ ಸೂಚನೆ: ಡಿಸಿ ಮಿಶ್ರಾ

### ನಗರದ ವಿವಿಧ ವೃತ್ತಗಳನ್ನು ಸ್ವಚ್ಛ, ವಿದ್ಯುತ್ ದೀಪಾಲಂಕಾರ ವ್ಯವಸ್ಥೆ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಡಳಿತದಿಂದ ಜ.26ರಂದು ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ವಿಮ್ಸ್ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದು, ಯಾವುದೇ ಲೋಪವಾಗದಂತೆ ಅಚ್ಚುಕಟ್ಟಾಗಿ ಆಚರಣೆಗೆ ಸಿದ್ದತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಗಣರಾಜ್ಯೋತ್ಸವ ಆಚರಣೆ ಪೂರ್ವಭಾವಿ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗಣರಾಜ್ಯೋತ್ಸವ ಕಾರ್ಯಕ್ರಮವು ಶಿಷ್ಟಾಚಾರದಂತೆ ನಡೆಯಲಿದ್ದು, ಜ.26 ರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರು ರಾಷ್ಟ್ರಧ್ವಜಾರೋಹಣ ನೆರವೇರಿಸುವರು. ಇದಕ್ಕೂ ಮುನ್ನ ಬೆಳಿಗ್ಗೆ 08.15 ಕ್ಕೆ ನಗರದ ಹೆಚ್.ಆರ್.ಗವಿಯಪ್ಪ ವೃತ್ತದಲ್ಲಿ ಬೃಹತ್ ಧ್ವಜಾರೋಹಣ ನೆರವೇರಿಸಿ, 08.30 ಕ್ಕೆ ವಿಮ್ಸ್ ಬಳಿಯ ಮಹಾತ್ಮ ಗಾಂಧೀಜಿ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸುವರು. ತದನಂತರ 08.45 ಕ್ಕೆ ಪಥ ಸಂಚಲನ ವೀಕ್ಷಣೆ ಮಾಡುವರು. ಬಳಿಕ ಧ್ವಜಾರೋಹಣ ನೆರವೇರಿಸಿ, ಸಂದೇಶ ನೀಡುವರು ಎಂದು ತಿಳಿಸಿದರು.

ಪೊಲೀಸ್, ಎನ್.ಸಿ.ಸಿ, ಸ್ಕೌಟ್ಸ್ ಅಂಡ್ ಗೈಡ್ ಸೇರಿದಂತೆ ವಿವಿಧ ಶಾಲಾ, ಕಾಲೇಜು



ವಿದ್ಯಾರ್ಥಿಗಳಿಂದ ಆಕರ್ಷಕ ಪಥಸಂಚಲನ ನಡೆಯಲಿದ್ದು, ಪೊಲೀಸ್ ಇಲಾಖೆಯಿಂದ ಪಥಸಂಚಲನಕ್ಕೆ ಸಿದ್ದತೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ವಿಮ್ಸ್ ಕ್ರೀಡಾಂಗಣದಲ್ಲಿ ಕಾರ್ಯಕ್ರಮ ನಡೆಯುವುದರಿಂದ ಅಗತ್ಯವಿರುವ ಶಾಮಿಯಾನ ಸೇರಿದಂತೆ ವೇದಿಕೆ, ಆಸನದ ವ್ಯವಸ್ಥೆಯನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಬೇಕು ಮತ್ತು ಮೈದಾನದಲ್ಲಿ ಸ್ವಚ್ಚತೆಯನ್ನು ಕಾಪಾಡುವ ಮೂಲಕ ಮೈದಾನದಲ್ಲಿ ನೀರನ್ನು ಸಿಂಪರಣೆ ಮಾಡಲು ಮಹಾನಗರ ಪಾಲಿಕೆಯಿಂದ ಕ್ರಮ ವಹಿಸಬೇಕು. ಶಾಲಾ ಕಾಲೇಜು ಮಕ್ಕಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಬೇಕು ಎಂದು ತಿಳಿಸಿದರು.

ಶಾಲಾ ಮಕ್ಕಳಿಂದ ದೇಶಭಕ್ತಿ ಮೂಡಿಸುವ ಆಕರ್ಷಕವಾದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಏರ್ಪಡಿಸುವಂತೆ ಮತ್ತು ಇದಕ್ಕೆ ಬೇಕಾದ ತಾಲೀಮು ಮುಂಚಿತವಾಗಿ ಮಾಡಿಕೊಳ್ಳಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ತಿಳಿಸಿದರು.

ಗಣರಾಜ್ಯೋತ್ಸವ ಹಿನ್ನಲೆಯಲ್ಲಿ ನಗರದ ವಿವಿಧ ವೃತ್ತಗಳನ್ನು ಸ್ವಚ್ಛಗೊಳಿಸಬೇಕು. ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಬೇಕು ಎಂದು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ವೇದಿಕೆ ಕಾರ್ಯಕ್ರಮದಲ್ಲಿ ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಳ್ಳಲು ಜೆಸ್ಕಾಂ ಇಂಜಿನಿಯರ್‌ಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಸಹಾಯಕ ಆಯುಕ್ತರಾದ ಹೇಮಂತ್.ಎನ್, ಎಎಸ್ಪಿ ಕೆ.ಪಿ.ರವಿಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಇತರರು ಉಪಸ್ಥಿತರಿದ್ದರು.

# ಹ್ಯಾಳ್ಯಾದಲ್ಲಿ ಕೂಸಿನ ಮನೆ



**ಹಂಪಿ ಟೈಮ್ಸ್ ಕೊಟ್ಟೂರು**
ಗ್ರಾಮೀಣ ಪ್ರದೇಶಗಳಲ್ಲಿ ಕೂಲಿಕಾರ್ಮಿಕರು ಕೆಲಸ ಮಾಡುವ ವೇಳೆ ಮಕ್ಕಳ ಪೋಷಣೆ ಮತ್ತು ಪೌಷ್ಟಿಕಾಂಶ ಪೂರೈಕೆ ಜೊತೆಗೆ ದೈಹಿಕ ಬೆಳವಣಿಗೆ ಹಾಗೂ ಮಾನಸಿಕ ವಿಕಾಸದ ಹಿತದೃಷ್ಟಿಯಿಂದ ನೇರೇಗ ಯೋಜನೆ ಅಡಿ ಗ್ರಾಮದಲ್ಲಿ "ಕೂಸಿನ ಮನೆಯ" ಜಾರಿಗೆ ತರಲಾಗಿದೆ ಎಂದು ಪಿಡಿಒ ಸಿಎಚ್‌ಎಂ ಗಂಗಾಧರ ಹೇಳಿದರು.

ತಾಲೂಕಿನ ಹ್ಯಾಳ್ಯಾ ಗ್ರಾಮ ಪಂಚಾಯಿತಿ, ಹ್ಯಾಳ್ಯಾ ಗ್ರಾಮದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ನರೇಗಾ ಯೋಜನೆಯಡಿ ಬುಧವಾರ ಕೂಸಿನ ಮನೆಯ ಉದ್ಘಾಟಿಸಿ ಮಾತನಾಡಿದರು.

ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಡಿ.ಹಾಲಮ್ಮ ಕೂಸಿನ ಮನೆಯನ್ನು ಉದ್ಘಾಟಿಸಿ ನರೇಗ ಯೋಜನೆಯಡಿ ಸರ್ಕಾರವು ಮಹತ್ವ ಪೂರ್ಣ ಕಾರ್ಯಕ್ರಮ ಜಾರಿಗೆ ತಂದಿದ್ದು, ಪ್ರತಿಯೊಬ್ಬರು, ಶಿಶು ಪಾಲನೆ ಕೂಲಿಕಾರ ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಅಂಗನವಾಡಿ ಮೇಲ್ವಿಚಾರಕರಾದ ವೃತ್ತಿಯ ಬೇಗಂ ಮಾತನಾಡಿ, ಮಕ್ಕಳ ಪಾಲನೆ ಎಂಬುವುದು ತುಂಬಾ ಜವಾಬ್ದಾರಿಯುತ ಕೆಲಸವಾಗಿದೆ. ಇದನ್ನು ಶ್ರದ್ಧೆ, ಪ್ರೀತಿ ಮತ್ತು ವಾತ್ಸಲ್ಯದಿಂದ ನಿರ್ವಹಿಸಬೇಕು ಎಂದು ಆರೈಕೆದಾರರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಟಿಐಇಸಿ ಪ್ರಭು, ಗ್ರಾಮ ಪಂಚಾಯತಿ ಉಪಾಧ್ಯಕ್ಷ ಡಿ.ನಾಗೇಶ್, ಸದಸ್ಯ ನಾಗೇಶ್, ಗುಂಡಪ್ಪನ ಕೊಟ್ರೇಶ್, ಶಿಲ್ಪಾ ಟಿ ರಾಜ್, ಕೂಸಿನಮನೆಯ ಆರೈಕೆದಾರರು,ಗ್ರಂಥಾಲಯ ಮೇಲ್ವಿಚಾರಕರು ಲೋಕೇಶ್ ಸೇರಿದಂತೆ ಗ್ರಾಪಂ ಸಿಬ್ಬಂದಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಹಂಪಿ ಉತ್ಸವ: ದರಪಟ್ಟಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2023-24ನೇ ಸಾಲಿನ ಹಂಪಿ ಉತ್ಸವ ಕಾರ್ಯಕ್ರಮದ ಪ್ರಚಾರ ಬ್ಯಾನರಗಳ ಮುದ್ರಣ ಹಾಗೂ ಅಳವಡಿಸುವುದಕ್ಕೆ ದರಪಟ್ಟಿ ಆಹ್ವಾನಿಸಲಾಗಿದೆ.

ಬೇರೆ ಬೇರೆ ಅಳತೆಯಲ್ಲಿ ನಿಗದಿಪಡಿಸಿದ ಗುಣಮಟ್ಟದ ಬ್ಯಾನರಗಳ ವಿನ್ಯಾಸ ಹಾಗೂ ಮುದ್ರಣ, ಬ್ಯಾನರ್‌ಗಳ ಮುದ್ರಣ ಮತ್ತು ಅಳವಡಿಕೆ, ಬಸ್ ಸ್ಟೀಕರ್‌ಗಳ ವಿನ್ಯಾಸ ಹಾಗೂ ಅಳವಡಿಕೆ, ಸರ್ಕಲ್ ಹೋಲ್ಡಿಂಗ್‌ಗಳ ಮುದ್ರಣ ಹಾಗೂ ಅಳವಡಿಕೆಗೆ ಆಸಕ್ತ ಏಜೆನ್ಸಿಯಿಂದ ದರಪಟ್ಟಿ ಆಹ್ವಾನಿಸಲಾಗಿದ್ದು, ಅರ್ಹ ಸಂಸ್ಥೆಗಳು 7 ದಿನಗಳೊಳಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ ಇಲ್ಲಿಗೆ ಮುಚ್ಚಿದ ಲಕೋಟೆಯಲ್ಲಿ ತಲುಪಿಸಲು ಕೋರಲಾಗಿದೆ. ಅವಧಿ ಮೀರಿ ಬಂದ ಲಕೋಟೆಗಳನ್ನು ತಿರಸ್ಕರಿಸಲಾಗುವುದು.

**ಫೋಟೊ ಫ್ರೇಮ್ಸ್:** 2023-24ನೇ ಸಾಲಿನ ಹಂಪಿ ಉತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ನೀಡುವ ಛಾಯಾಚಿತ್ರಗಳಿಗೆ ಉತ್ತಮ ಗುಣಮಟ್ಟದ ಹಾಗೂ ನಿಗದಿಪಡಿಸಿದ ಅಳತೆಯ ಛಾಯಾಚಿತ್ರಗಳಿಗೆ ಪ್ರೇಮ್ ಅಳವಡಿಸುವುದಕ್ಕೆ ಆಸಕ್ತ ಏಜೆನ್ಸಿಯಿಂದ ದರಪಟ್ಟಿ ಆಹ್ವಾನಿಸಲಾಗಿದೆ.

ಅರ್ಹ ಸಂಸ್ಥೆಗಳು 7 ದಿನಗಳೊಳಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ ಇಲ್ಲಿಗೆ ಮುಚ್ಚಿದ ಲಕೋಟೆಯಲ್ಲಿ ತಲುಪಿಸಲು ಕೋರಲಾಗಿದೆ. ಅವಧಿ ಮೀರಿ ಬಂದ ಲಕೋಟೆಗಳನ್ನು ತಿರಸ್ಕರಿಸಲಾಗುವುದು ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA